Azim Premji Foundation

# FA TALKIES

EXPLORING THE VOICES UNHEARD

NOVEMBER 2017 Issue-XII



ಫಟಾಕೀಸ್

# FA TALKIES

EXPLORING THE VOICES UNHEARD




12

# FA-TALKIES

# CONTENTS


ಮೇರಿ ಕ್ಯೂರಿ- **नाम तो सुना होगा** -ಜನಾರ್ಧನ್ ಜಿಎನ್....4

**The Moon & Me.....** **- Gargi N Shabaray**....5

ಪ್ರೇಮ ರೋಗಿಯ ಪಯಣ - ಸ್ವಾತಿ ಸುಬ್ರಹ್ಮಣ್ಯ....6

**Circular Circle** **- Vijayashree P S.**....7

**Methods of teaching during *Vedic* Period** **-Sachin Kumar Salakki**....8

ಇರಬಾರದು ಹೀಗೇಕೆ? - ಅವಿನಾಶ ಡಿ....9

ಸಂಬಂಧ ದೊಡ್ಡದು ! -ಪೆರಿ....9

ಸಲಾಕೆ... - ಸಅಗೆಯಾಕೆ..??? - ಶ್ರೀನಿವಾಸ ರಾವ್ ಎಸ್. ಪಿ....9

ಕನ್ನಡ ನಾಡು ನುಡಿ - ಅಶ್ವಿನಿ ಎಸ್....11

ಸದ್ಯ ಮಲೆನಾಡು –ರಕ್ಷಿತ್ ಅರುಣ್....12

ಅವು ಪುಸ್ತಕಗಳಲ್ಲ ಮನಸುಗಳು...! -ಮಂಜುನಾಥ್ ಎ.ಆರ್....12

ಮುಲಾಮು ಹಚ್ಚಿದವನು -ಮಂಜುಳಾ ಜಿ.ಹೆಚ್ ಮುದ್ದೇಬಿಹಾಳ್ ಟಿಎಲ್‌ಸಿ....14

36-ಕೋಟಿ-ನಾಡಿನ ಒಡನಾಟದ ಹೂರಣ -ರಾಘವೇಂದ್ರ ಗಂಗಾವತಿ....15

## ಮೇರಿ ಕ್ಯೂರಿ- नाम तो सुना होगा -ಜನಾರ್ಧನ್ ಜಿಎನ್

ಹಾದು! ಪ್ರಾಥಮಿಕ ಶಿಕ್ಷಣ ಪೂರೈಸಿದವರೇ ಹಾಗಿದ್ದರೂ ಈ ಹೆಸರನ್ನ ಕೇಳರಲೇ ಬೇಕು. ವಿಜ್ಞಾನ ಕ್ಷೇತ್ರಕ್ಕೆ ಇವರು ನೀಡಿದ ಕೊಡುಗೆ ಅಂಥದ್ದು.

ನವೆಂಬರ್ 7ರಂದು ಅವರ 150ನೇ ಜನ್ಮದಿನಾಚರಣೆಯ ಪ್ರಯುಕ್ತ ಬೆಂಗಳೂರಿನ ಜವಾಹರ್‌ಲಾಲ್ ನೆಹರು ತಾರಾಲಯದಲ್ಲಿ ಶಿಕ್ಷಕರಿಗೋಸ್ಕರ ವಿಚಾರ ಸಂಕಿರಣ ಹಮ್ಮಿಕೊಳ್ಳಲಾಗಿತ್ತು. ಪ್ರತಿಷ್ಠಿತ ಹೆಚ್‌ಎಎಲ್‌ನಲ್ಲಿ ಡಿಜಿಎಂ ಆಗಿ ಕಾರ್ಯ ನಿರ್ವಹಿಸುತ್ತಿರುವ ಡಾ.ನೇಮಿಚಂದಾರವರು ಮೇರಿ ಕ್ಯೂರಿರವರ ಜೀವನ ಚರಿತ್ರೆಯನ್ನು ಎಳೆಎಳೆಯಾಗಿ ಬಿಡಿಸಿಟ್ಟರು. 40 ವರ್ಷಗಳ ಹಿಂದೆ ಒಬ್ಬ ಮಹಿಳೆಯಾಗಿ ಇಂಜಿನೀಯರಿಂಗ್ ವ್ಯಾಸಂಗಮಾಡಲು ಆಕೆಯು ಅನುಭವಿಸಿದ ಅಡೆತಡೆಗಳು ಹಾಗೂ ಅವುಗಳನ್ನು ಆಕೆಯು ಮೆಟ್ಟಿನಿಂತ ಬಗೆಯ ಕುರಿತಾದ ಒಂದು ಸಣ್ಣ ಪುಸ್ತಕ ತಮ್ಮನ್ನು ಹೇಗೆ ಪ್ರೇರೇಪಿಸಿತು ಎಂದು ನೇಮಿಚಂದ್ರರವರು ಹೇಳುವಾಗ, ಆ ದಿನಗಳಲ್ಲಿ ಮಹಿಳೆಯರು ಸಮಾಜದಲ್ಲಿ ಮನೆಗೆಲಸದ ಪಾತ್ರವನ್ನು ಬಿಟ್ಟು ವಿಭಿನ್ನವಾದ ಸಾಧನೆಮಾಡಲು ಹೊರಟಾಗ ಅವರು ಅನುಭವಿಸುತ್ತಿದ್ದ ಆ ಸಾಮಾಜಿಕ ಶೋಷಣೆ, ಎಡರು-ತೊಡರುಗಳು ಕಣ್ಮುಂದೆ ಸುಳಿದವು. ವಿಚಾರ ಸಂಕಿರಣಕ್ಕೆ ಹೋಗುವ ಮೊದಲೇ ಮೇರಿಕ್ಯೂರಿಯವರ ಬಗ್ಗೆ ಅಂತರಜಾಲದಲ್ಲಿ ಗೂಗಲಿಸಿದ ಮಾಹಿತಿಯನ್ನ ಓದಿಕೊಂಡಿದ್ದ ನನ್ನ ಕಣ್ಣಂಚಲಿ ಹನಿಗಳು ತುಂಬಿಕೊಂಡವು. ಅವರನ್ನು ನಾನೂ ಕೇವಲ ವಿಜ್ಞಾನಿಯಾಗಷ್ಟೇ ಭಾವಿಸಲು ಸಾಧ್ಯವಾಗಲಿಲ್ಲ. ಅವರದ್ದು ವಿಜ್ಞಾನಿಯ ಚರಿತ್ರೆ ಎನಿಸಲಿಲ್ಲ. ಅದಕ್ಕೂ ಮೀರಿ ಆವರೊಬ್ಬ ಶ್ರೇಷ್ಟ ಮಾನವತಾವಾದಿ ಎಂದೆನೆಸಿತು. ಎರಡು ಬೇರೆ ಬೇರೆ (ಭೌತಶಾಸ್ತ್ರ ಮತ್ತು ರಸಾಯನಶಾಸ್ತ್ರ) ಕ್ಷೇತ್ರಗಳಲ್ಲಿ ಎರಡು ನೊಬೆಲ್ ಗಳಿಸಿದ ಏಕೈಕ ವಿಜ್ಞಾನಿ ಮೇಡಂ ಕ್ಯೂರಿ.



ಸ್ವತಂತ್ರ ದೇಶವಾಗಿ ಸೋವಿಯತ್ ಒಕ್ಕೂಟದಿಂದ ಹೊರಹೊಮ್ಮಲು ಹವಣಿಸುತ್ತಿದ್ದ ಪುಟ್ಟರಾಷ್ಟ್ರ ಪೋಲೆಂಡ್ ದೇಶದ ಒಬ್ಬ ಸಾಮಾನ್ಯ ಹೈಸ್ಕೂಲ್ ಶಿಕ್ಷಕನ 4ನೇ ಮಗಳಾಗಿ ಜನಿಸಿದ ಇವರು ಶ್ರೇಷ್ಟ ವಿಜ್ಞಾನಿಯಾಗಿ ಬೆಳೆದುನಿಂತಿದ್ದು ಈಡೀ ಸಮಾಜಕ್ಕೆ ಅದರಲ್ಲೂ ವಿಶೇಷವಾಗಿ ಮಹಿಳೆಯರಿಗೆ, ಅವಕಾಶವಂಚಿತರಿಗೆ ಏನನ್ನೋ ಸಾಧಿಸುವ ಸ್ಫೂರ್ತಿಯನ್ನು ತುಂಬುವ ಶಕ್ತಿಯಾಗಿ ಜೀವಂತವಾಗಿದ್ದಾರೆ. ಹೈಸ್ಕೂಲ್ ಶಿಕ್ಷಣವನ್ನು ಮುಗಿಸಿದ ಮೇರಿ, ತನಗಿಂತಲೂ ಮೂರು ವರ್ಷ ಮೊದಲೇ ಹೈಸ್ಕೂಲ್ ಶಿಕ್ಷಣ ಮುಗಿಸಿದ್ದ ತನ್ನ ಅಕ್ಕನ ವೈದ್ಯಳಾಗಬೇಕೆಂಬ ಒತ್ತಾಸೆಗೆ ಜೊತೆನಿಂತು, ಮಕ್ಕಳಿಗೆ ಪಾಠಹೇಳಿ ಹಣ ಸಂಪಾದಿಸಿ ಆಕೆಯನ್ನು ಉನ್ನತ ವ್ಯಾಸಂಗಕ್ಕಾಗಿ ಪ್ಯಾರಿಸ್‌ಗೆ ಹೋಗಲು ನೆರವಾದ ಪರಿಯನ್ನು ನೋಡುವಾಗ ಚಿಕ್ಕವಯಸ್ಸಿನ ಪ್ರಬುದ್ಧೆಯ ಬಗ್ಗೆ ಅಚ್ಚರಿಮೂಡುವ ಜೊತೆಗೆ ಹೆಮ್ಮೆಯೆನಿಸಿತು. ಮಕ್ಕಳಿಗೆ ಪಾಠಮಾಡುವ ವೃತ್ತಿಯೊಂದಿಗೆ ಕಷ್ಟಪಡುತ್ತಾ ಹಣಹೊಂದಿಸಿಕೊಂಡು ತಾನೂ ಪ್ಯಾರಿಸ್‌ಗೆ ಹೋಗಿ ವಿದ್ಯಾಭ್ಯಾಸವನ್ನು ಮುಂದುವರಿಸಿದ ಮೇರಿ ಕನಿಷ್ಟ ಸೌಲಭ್ಯಗಳೂ ಇಲ್ಲದ ಸಣ್ಣ ಕೊಠಡಿಯಲ್ಲಿದ್ದುಕೊಂಡು ಚಿನ್ನದ ಪದಕದೊಂದಿಗೆ ಪದವಿ ಶಿಕ್ಷಣವನ್ನು ಪೂರೈಸಿಕೊಂಡರು.

ಮೊದಲ ಮಹಾಯುದ್ಧದ ಸಮಯದಲ್ಲಿ ತನ್ನ ಸಂಶೋಧನೆಯನ್ನು ಸ್ಥಗಿತಗೊಳಿಸಿ, ಆಗಿನ್ನೂ ವಿರಳವಾಗಿದ್ದ ಕ್ಷ-ಕಿರಣ ಉಪಕರಣಗಳನ್ನು ಯುದ್ಧಭೂಮಿಗೆ ನೇರವಾಗಿ ಓಡಾಡಬಲ್ಲ ವಾಹನಗಳಲ್ಲಿ ಅಳವಡಿಸಿ, ಅದನ್ನು ಉಪಯೋಗಿಸಲು 50 ಸ್ವಯಂ ಸೇವಕರಿಗೆ ತರಬೇತಿ ನೀಡಿ ಲಕ್ಷಾಂತರ ಸೈನಿಕರ ಜೀವವನ್ನೂ ಉಳಿಸಲು ನೆರವಾಗಿದ್ದ ಅವರ ಮನೋಧರ್ಮವನ್ನು ಅಂದು ಇಡೀ ಜಗತ್ತೇ ಶ್ಲಾಘಿಸಿತ್ತು.

ಡಾ.ನೇಮಿಚಂದ್ರರವರು ತಮಗೆ ಸ್ಫೂರ್ತಿತುಂಬಿದ ಮೇರಿ ಕ್ಯೂರಿಯವರ ಜೀವನ ಚರಿತ್ರೆಯ ಪುಸ್ತಕದಿಂದ ಎಷ್ಟು ಪ್ರಭಾವಿತರಾಗಿದ್ದರು ಎಂಬುದು ನನಗೆ ಅರ್ಥವಾಗಿದ್ದು, ಅವರು ಮ್ಯೇರಿ ಕ್ಯೂರಿ ಓದಿದ, ಕೆಲಸಮಾಡಿದ ಮತ್ತು ಅವರ ಸಮಾಧಿ ಸ್ಥಳಗಳನ್ನು ನೋಡಲೆಂದೇ ಕೂಡಿಟ್ಟ ಹಣದಿಂದ ಅವರು ಪ್ಯಾರಿಸ್ ಟೂರ್‌ಗೆ ಹೋಗಿಬಂದ ಛಾಯಚಿತ್ರಗಳನ್ನು ಪ್ರದರ್ಶಿಸಿದಾಗ.

ಅಬ್ಬಾ! ಇಂತಹ ಅದೆಷ್ಟು ವ್ಯಕ್ತಿಗಳಿಗೆ ಸ್ಫೂರ್ತಿಯಾಗಿ ಇನ್ನೂ ನಮ್ಮೊಡನೇ ಜೀವಂತವಾಗಿದ್ದಾರೆ ಮೇಡಂ ಮೇರಿ ಕ್ಯೂರಿ! ಛಲವಿದ್ದರೇ ಏನನ್ನೂ ಸಾಧಿಸಬಹುದು ಎಂದು ತೋರಿಸಿಕೊಟ್ಟ ಮೇಡಂ ಕ್ಯೂರಿಗೆ ಸಲಾಂ!

I am a girl of fantasy who always love dwelling and rambling in my own fairyland, Pluto today, Venus tomorrow or some other galaxy overmorrow. Few days back this fictitious lady marched back to Earth and started imagining if she had a soulmate like moon always revolving around her, illuminating her and loving her unconditionally.



No! it's not a mere decision of haste. I have justifications for selecting moon as my life partner. He is a loyal companion. He never leaves. He is always there, watching, playing hide and seek, steadfast, knowing me in my light and dark moments and changing forever just as I do. Every day he is a different version of himself. Sometimes weak and wan, sometimes strong and full of light. The moon understands what it means to be a human. Uncertain. Alone. Cratered by imperfections. He does not fight. He attacks no one. He does not worry. He does not try to crush others. He keeps to his own course, but by his very nature, he

gently influences. The moon is faithful to his nature and his power is never diminished. His bewitching light instigates dark passions like a cold flame, making hearts burning with the intensity of phosphorus. He is the one and the only, who is been able to mirror a woman's life. He knows what it is to be a woman and having different phases in a month. He is going to be my refelction…………………………………………………………………………………………

**ಪ್ರೇಮ ರೋಗಿಯ ಪಯಣ** - ಸ್ವಾತಿ ಸುಬ್ರಹ್ಮಣ್ಯ

ಕೈ ಹಿಡಿದು ಸವೆಸಿದ ರಸ್ತೆಯ ತಿರುವುಗಳು
ನಿನ್ನ ಕ್ಷೇಮ ಕೇಳುತ್ತಿದೆ
ಪ್ರಶ್ನಾರ್ಥಕ ಕಣ್ಣುಗಳನು ನಾ ಎದುರಿಸಲಾರೆ
ಹೆಗಲ ಮೇಲೆ ಮೃದು ಆಲಿಂಗನವೊಂದು
ಹಾದು ಹೋದ ಅನುಭವ

ಅಗೋ ಅಲ್ಲಿ ಕಿಕ್ಕಿರಿದು ಜನ ಸೇರಿದ್ದಾರೆ
ಸಂಭ್ರಮದ ಸದ್ದು ಮುಗಿಲು ಮುಟ್ಟಿದೆ
ನಾನಿಲ್ಲಿ ಕಿಸೆಯೊಳಗಿನ ನೆನಪುಗಳನ್ನು ಎಣಿಸುತ್ತಿದ್ದೇನೆ

ತಂಬೂರಿಯ ತಂತಿಯಂತೆ ಮಿಡಿಯುವ ಆಸೆಯಾಗಿದೆ
ನಿನ್ನ ತೋಳುಗಳು ಪ್ರಾಯಶಃ ತುಡಿತದಲ್ಲಿದ್ದೀತು
ಚೆಲ್ಲಿ ಹೋಗಲು ಬಿಡಬೇಡ
ನಿನ್ನ ಸುವಾಸನೆಯ ಮೋಡಿಯಲ್ಲಿ ಮುಳುಗುವ ಸಮಯವಾಗಿದೆ

ಸಾವಕಾಶ !!
ಕಿಡಿಗೇಡಿ ಕನಸುಗಳು ಬಂಧನದಲ್ಲಿವೆ
ಗಂಟೆಗಟ್ಟಲೆ ಮಾತುಗಳಿಗೆ ಸಾಕ್ಷಿಯಾದ ಗಡಿಯಾರಕ್ಕೆ,
ನಿನ್ನ ಗೈರು ಹಾಜರಿಯ ಚಿಂತೆ
ನೆನಪುಗಳ ದಾಖಲಾತಿ ಹೇರಳವಾಗಿದೆ
ಮೌನ ಮಂದಿರದ ರಾಣಿಯಾಗಿ ಆಯ್ಕೆ ಮಾಡಿದ್ದಕ್ಕೆ ಋಣಿಯಾಗಿದ್ದೇನೆ

ಅರಮನೆಯ ಅಂತಸ್ತಿನಿಂದ ಬಹಿಷ್ಕಾರ ಹಾಕಬೇಡ
ಬಡಪಾಯಿ ಜೀವಕೆ ಬದುಕುವ ಆಸೆ
ಮುನಿಸಿನಿಂದ ಒಂದೆರಡು ಬೈಗುಳವು ನಡೆದೀತು
ಮನಸಿನಿಂದ ಒಂದೊಂದು ನಿಮಿಷವೂ ಸರಿಸದಿರು

ಕಾದಿರುವ ಕಣ್ಣುಗಳನು ಸಂತೈಸು ಒಮ್ಮೆ
ಸಾಕ್ಷಾತ್ ಸನ್ನಿಧಿಯ ನಿರೀಕ್ಷೆಯಲ್ಲಿ

ನಿನ್ನವಳು....

## Circular Circle - Vijayashree P S

While I am completely conscious of interviewing a teacher (as part of the Teacher study), the teacher is semi-aware of the fact that we are deducing her skill set and mind-set about teaching. The teacher with her surface level response was trying to bridge her real answers with ideal answers.
Flowing with the stream of triggering points to bring the teacher to a discussion mode instead of just 'one-word' answers. I was trying my best to make it more non-formal, the teacher was also trying her best to not give-in. it was a good juggal-banthi!!!!!

At one-point, a question from my end *'Have you connected other subjects while teaching your subject?'* a disbelief overtook her eyes. She just went mute for a couple of seconds. I was also left with equal degree of amusement, in additional I also sat with a ray of helplessness completely unaware of what to do next! But, thanks to the teacher, yes, she broke the ice! She very politely responded for the question, 'NO'. I sighed at heart and instead of taking the risk of digging about the same one-word answer, I moved on with the succeeding questions, again trying my best to take it in a discussion mode. After a few minutes, we ended the conversation, and the evening as well.

A new day, an enthusiasm to observe her class today. It took me a Wow! The moment I saw the teacher so finely dressed. When complimented her, she was so happy to express that it was Friday! (Usually women practice rituals at home every Friday). The teacher welcomed me to her classroom, the students screamed and jumped. With a warm smile, she asked me to take the last bench. By then, kids were pouncing on me! The best part was, the teacher never trying to stop the kids. She waited for the kids to shoot me with all possible questions and only after the kids were exhausted, she uttered 'Settle down children'. The students immediately leaped to their respective seats.
The teacher began recalling the previous day's concepts. The kids were extremely happy to give answers and even argue among themselves, when the friends gave incorrect answers. After a couple of recalling debate, the teacher began explain about the present days planned concepts. While I was observing and the noting down the observation notes. At one-point, the teacher unconsciously put me on mute. Yes! I was amazed by her! "***While she explaining 'Circular motion', she tried connecting it to a 'Circle' in geometry".***

As I got my answer for the previous days conversation with the teacher. ***I smiled*** putting my head down, staring at the book, while taking the notes. I admired her for the quick learning nature! I couldn't stay in the same thought for a longtime, as I must proceed with observing the class further.
After the completion of the class, when enquired the teacher about her lesson plan. She was very humble in sharing that, the question '*Have you connected other subjects while teaching your subject?'* was a moment of realization for her. She hence planned for connecting subjects. As I fell short of words, I really could express my admiration only through a Smile!
The teacher made my day! The willingness to learn was proven through her actions!

## Methods of teaching during *Vedic* Period

-Sachin Kumar Salakki

We are involved in the discussions on the education systems that transformed the civilizations. The education system's that which led to the evolution of the society. One such education system which is the center of discussion among the entire educationist's is the *Vedic* period education system and the method of teaching.

### *Vedic* Education system

The Vedic education system was certainly different from the present systems. Vedic schools were called as *Gurukula*'s; which were usually are homes or *Ashrama*'s of Guru's.
Student is sent to *Ashrama's* just at the brink of puberty. This concept perfectly executes the idea of "*Bramhacharya*"- the idea of being away from worldly pleasures.

### Objectives of *Vedic* Education system

Prepare Individual to attain social and economic opportunities and prepare him to earn a respectful life in the civilized society.
Penetration of piety and building morality in the student's mind.
The system was mainly aimed at guiding a person to get well versed with the occupation to framer their career.
Education was strictly taught to be obedient to elders, be truthful and honest and to attain self-control.
Students were taught the art of gaining self-confidence and self-respect. They were taught to gain control over judgment and discrimination.

### Method of Education

*Vedic* system was mainly verbal education in the forms of hymns and poetry. Verbal education was taught individually and imparted to students to preserve the knowledge throughout their life.
Hymns are taught to be remembered and their meanings are realized through meditation.

### Instruction methods

Instruction was prominently were of three types.
*Shravana* - Is the Method where teacher reads out the verses and students listen to them to grab the words.
*Manana* - This is similar to the memorization or revision method of education. Students deliberately reflect the topic taught to memorize them.
*Nidhidhyasana* - This means meditation. It is a method by which truth is realized and attained. This was a very important method by which self-realization was found.

### Conclusion

The *Vedic* system of education was more liberal and contemplative. This system turned humans to become highly capable and dedicated to acquiring supreme knowledge.

## ಇರಬಾರದು ಹೀಗೇಕೆ? - ಅವಿನಾಶ ಡಿ ಹೊಸಪೇಟೆ

ನಿನ್ನೊಳಗೊಮ್ಮೆ ನಿನ್ನ ಗುರುತಿಸಿಕೊಳ್ಳಬಲ್ಲೆಯ
ಅಹಂ ಬಿಟ್ಟು ಎಲ್ಲ ಅಸ್ಮಿತೆಗೂ ಬೆಲೆ ಕೊಡಬಲ್ಲೆಯಾ...
ನಡೆಯುತಿರುವಾಗ ಕಾಲ್ಗುರುತು ಮರಳಲ್ಲು ಕಾಣುತ್ತಿರಬೇಕು
ಸಿಗದಿದ್ದರು ಯಾವುದು ಇಲ್ಲಿ ನಗುತಿರಬೇಕು
ಬದುಕಿನುದ್ದಕ್ಕು ನೋವು ನಲಿವುಗಳ ಜೊತೆಗೆ ನೀ ನಿನ್ನಂತಿರಬೇಕು
ಯಾವುದು ಶಾಶ್ವತವಲ್ಲ, ಯಾವುದು ನಿಶ್ಚಿತವಲ್ಲ
ಆಗುವುದೆಲ್ಲಕ್ಕೂ ನೀನೆ ಕಾರಣನು
ಅನಂತತೆಗು ನಿಲುಕದ ಚಿಂತನಾಶೀಲನು ನೀನು; ಆದರೂ
ಕೊರಗುತಿರುವೆ ಮರುಗುತಿರುವೆ ತಿರುಗುತಿರುವೆ
ಬೇಡುತಿರುವೆ ಶಪಿಸುತಿರುವೆ ಟೀಕಿಸುತ್ತಲೇ ಇರುವೆ...
ಕೊನೆಗಾಣುವುದೆಂತು ರಾಡಿ ಮನಸ್ಸಿನ ನೀಚತನ ಮರೆಯುದೆಂತು ಕ್ರೂರತನ
ಎಲ್ಲವೂ ಒಂದೇ ತರ ಆದರೂ ನೋಡುವ ಕಣ್ಣಿಗೆ ತರ ತರ
ಯಾರ್‍ಯಾರು ಬಂದು ಹೋದರೂ ಬದಲಾಗುತ್ತಿಲ್ಲವೇಕೆ?
ಯಾರನ್ನು ದೂರಿದರೇನು ಫಲ
ನೀನು ಹಾಗೆ ಇರುವಾಗ......!!!

## ಸಂಬಂಧ ದೊಡ್ಡದು ! -ಪೆರಿ

'ಸಂಬಂಧ ದೊಡ್ಡದು', ಇದು ನನ್ನ ತಾತ **'ಚಂದು'** ಹೇಳುತ್ತಿದ್ದ ಮಾತು. ಬಡತನದ, ಕೆಳಜಾತಿಯ ಕುಟುಂಬದಲ್ಲಿ ಹುಟ್ಟಿ ಸಾಕಷ್ಟು ಸಾಧನೆಗೈದ ವ್ಯಕ್ತಿ ಆತ. ಮಡಿಕೆ ಮಾಡುವುದನ್ನು ಬಿಟ್ಟು, ವ್ಯವಸಾಯ ಸುರು ಮಾಡಿ ಯಶಸ್ಸು ಕಂಡವರು. ಹಾಗೆ ನೋಡಿದರೆ ಗ್ರಾಮೀಣ ಕ್ರೀಡೆಯಲ್ಲಿ ಸಾಕಷ್ಟು ಹೆಸರು ಮಾಡಿದವರು. ಇಂದಿಗೂ ನಮ್ಮ ಊರಲ್ಲಿ ಅವರನ್ನು ನೆನೆಯುವ ಸಂದರ್ಭಗಳು ಇವೆ. ನ್ಯಾಯಾನ್ಯಾಯದ ವಿಚಾರಗಳು ಬಂದಾಗ ಅವರನ್ನು ನೆನೆದು, 'ಆಳುವವರ ದರ್ಪದ ಮುಂದೆ ಬಡವರ ಪರವಾಗಿ ನಿಂತು ನ್ಯಾಯ ಒದಗಿಸಿದವರು' ಎಂದು ಜನ ಮಾತಾಡಿಕೊಳ್ಳುತ್ತಾರೆ. ಅವರ ಜೀವನದಲ್ಲಿ ಒಂದು ಪ್ರಭಾವಿ ಎಳೆ ಇತ್ತು. ಅದು ಅವರ **'ಸಂಬಂಧ'**ಗಳ ಎಳೆ! ಅವರಿಗೆ ತುಂಬಾ ಸಂಬಂಧಗಳಿದ್ದವು, ಅವು ಚೆನ್ನಾಗಿಯೂ ಇದ್ದವು. ಹಾಗೆ ನೋಡಿದರೆ ಅಷ್ಟೇ ಗಾಢವಾಗಿಯೂ ಇದ್ದವು. ಸಾಯುವ ತನಕವೂ ಚಂದು ಆ ಸಂಬಂಧಗಳಲ್ಲಿ ತುಂಬಾ ಸಂತೋಷದಲ್ಲಿ ಇದ್ದರು, ತುಂಬಾ ನೆಮ್ಮದಿಯಲ್ಲಿ ಇದ್ದರು.

ತುಂಬಾ ಚಿಕ್ಕಂದಿನಿಂದ ನನಗೆ ಯಾವಾಗಲೂ ಒಂದು ಪ್ರಶ್ನೆ ಉದ್ಭವಿಸುವುದು. ತಾತ ಇಷ್ಟು ನೆಮ್ಮದಿಯಲ್ಲಿ ಇರಲು ಹೇಗೆ ಸಾಧ್ಯ? ನಾನು ಬೆಳೆಯುತ್ತಿದ್ದ ಹಾಗೆ ಈ ಪ್ರಶ್ನೆ ಹೆಚ್ಚು ಕಾಡುತ್ತಿತ್ತು. ಮೊನ್ನೆ **TED Talk**ನಲ್ಲಿ ಒಂದು ಆಸಕ್ತಿ ಪೂರ್ಣ ಭಾಷಣ ಕೇಳಿದ ನಾನು ದಂಗಾದೆ! ಇದು ಪ್ರಪಂಚದಲ್ಲಿರುವ ಅತ್ಯಂತ ದೀರ್ಘ ಅಧ್ಯಯನ. 75 ವರ್ಷ ದಾಟಿದ, ೧937ರಲ್ಲಿ ಪ್ರಾರಂಭವಾಗಿ ಇಂದಿಗೂ ನಡೆಯುತ್ತಿರುವ ಈ ಅಧ್ಯಯನ ಜನರ ಸಂತೋಷ ಹಾಗೂ ನೆಮ್ಮದಿಯ ಬಗ್ಗೆ ಇರುವ ಏಕೈಕ **Study**. 724 ಜನರನ್ನು ನಿರಂತರವಾಗಿ **Study** ಮಾಡಿದ್ದಾರೆ. ಪ್ರತಿ ಎರಡು ವರ್ಷಕ್ಕೊಮ್ಮೆ ಅವರಲ್ಲಿ ಹೋಗಿ ಸವಿಸ್ತಾರವಾದ ಮಾಹಿತಿ ಸಂಗ್ರಹಿಸಿದ್ದಾರೆ. ಕಿಶೋರರಾದಾಗಿನ ಆ ಜನ ಅನೇಕರು ಈಗ ೯೦ರ ಹೊಸ್ತಿಲಲ್ಲಿದ್ದಾರೆ. ಮಾಹಿತಿ ಸಂಗ್ರಹಿಸುವುದು ಮಾತ್ರ ಅಲ್ಲ, ಅವರ ಮೆಡಿಕಲ್ ರಿಪೋರ್ಟ್ ಕೂಡ ಸಂಗ್ರಹಿಸಿದ್ದಾರೆ. ಹಾಗೇನೇ ಅವರ ಮೆದುಳಿನ ಸ್ಕ್ಯಾನಿಂಗ್ ಕೂಡ ಸಂಗ್ರಹಿಸಿದ್ದಾರೆ. ಅವರ ಪತ್ನಿಯರಲ್ಲಿ ಮಾತಾಡಿಸಿದ್ದಾರೆ. ಆ ಮಾತುಕತೆಯನ್ನು ವಿಶ್ಲೇಷಿಸಿದ್ದಾರೆ. ಆ ಗಂಡಸರ ಮಕ್ಕಳನ್ನು **Study** ಮಾಡಲು ಪ್ರಾರಂಭಿಸಿದ್ದಾರೆ. ಪ್ರಪಂಚದಲ್ಲಿ ಇಷ್ಟು ದೀರ್ಘಕಾಲೀಕ ಹಾಗೂ ಇಷ್ಟು ನಿದಿಷ್ಟವಾದ ಅಧ್ಯಯನ ಇನ್ನೊಂದಿಲ್ಲ ಎನ್ನಬಹುದು. ಈ ಅಧ್ಯಯನ ಜನರ ಸುಖೀ ಜೀವನದ ಬಗ್ಗೆ ಸರಳವಾದ ಕೆಲವು ವಿಷಯ ಹೇಳುತ್ತದೆ. ಇದರಲ್ಲಿ ಬರುವ ನಾಲ್ಕು ಪ್ರಮುಖ ಕಲಿಕೆಗಳನ್ನು ರಾಬರ್ಟ್ ವಾಲ್ಡಿನ್ಸ್ ತಮ್ಮ ಟೆಡ್ ಟಾಕ್‌ಲ್ಲಿ ಹೀಗೆ ನಮ್ಮ ಮುಂದಿಡುತ್ತಾರೆ:

**1. Good Relationship keeps us healthy and happy**

ಹೌದು, ಇದು ಅತ್ಯಂತ ಪ್ರಮುಖವಾದ ವಿಷಯ. ಒಳ್ಳೆಯ ಸಂಬಂಧಗಳು ನಮ್ಮನ್ನು ಆರೋಗ್ಯಕರವಾಗಿಡುತ್ತವೆ. ಆರೋಗ್ಯದ ಎರಡು ಅಂಶಗಳಾದ ದೈಹಿಕತೆ ಮತ್ತು ಮಾನಸಿಕತೆಗಳ ಬಗ್ಗೆ ಈ **Study**ಯಲ್ಲಿ ತುಂಬಾ ವಿಸ್ತರಣೆಯಿದೆ. ನಮಗೆ ಒಳ್ಳೆಯ 'ಫ್ರೆಂಡ್ಸ್' ಬೇಕು. ಅವರೊಂದಿಗಿನ ಸಂಬಂಧ ಚೆನ್ನಾಗಿರಬೇಕು. ಅತ್ಯಂತ ಸರಳವಾಗಿರುವ ಈ ವಿಷಯ ಮಾತ್ರ ಇವತ್ತಿನ ಸಮಾಜದಲ್ಲಿ ತುಂಬಾ ಕಷ್ಟದ ವಿಷಯ.

**2. Quality of the Relationship is the Key**

ಸಂಬಂಧಗಳು ತುಂಬ ಇರಬಹುದು. ಆದರೆ ಇರುವುದರ ಗುಣ ಹೇಗಿದೆ ಎಂಬುದು ತುಂಬ ಪ್ರಮುಖ ವಿಷಯವಾಗಿದೆ. ಸಂಬಂಧಗಳು ಎಷ್ಟು ಗಾಢವಾಗಿವೆ, ಅದರಲ್ಲಿ ಪ್ರೀತಿ ಕಾಳಜಿ ಗೌರವಗಳು ಎಷ್ಟು ತುಂಬಿವೆ ಎಂಬುದು ಮಹತ್ವದ ವಿಷಯವಾಗುತ್ತದೆ. ಅಂದರೆ ಸಂಬಂಧಗಳು ಇದ್ದರಷ್ಟೆ ಸಾಲದು, ಅದು ಆತ್ಮೀಯವಾಗಿರುವುದು, ಪ್ರೀತಿಯುತವಿರುವುದು, ಗೌರವದಿಂದ ಕೂಡಿರುವುದು ಬಹಳ ಮುಖ್ಯವಾಗಿದೆ.

**3. Good Relationship protects not only body but brain too**

ಇದು ಆಶ್ಚರ್ಯಕರವಾದ ವಿಷಯ. ಒಳ್ಳೆಯ ಸಂಬಂಧ ನಮ್ಮ ಮೆದುಳಿನ ಮೇಲೆ ಸಕರಾತ್ಮಕ ಪ್ರಭಾವವನ್ನು ಬೀರುತ್ತದೆ. ವೃದ್ಧಾಪ್ಯದಲ್ಲಿ ಒಳ್ಳೆಯ ಸಂಬಂಧಗಳಿದ್ದಾಗ ಮೈಕೈ ನೋವು ಕಡಿಮೆಯಾಗುವುದು ಮಾತ್ರವಲ್ಲ, ಮೆದುಳು ಕೂಡ ಚುರುಕಾಗಿ ಅಷ್ಟೇ ಉತ್ಸಾಹದಿಂದ ಕೆಲಸ ಮಾಡುತ್ತದೆ. ಮುದುಕರು ಸಂಬಂಧಗಳು ಚೆನ್ನಾಗಿದ್ದಾಗ ಖುಷಿಯಿಂದ, ಸುಖದಿಂದ ಇರುತ್ತಾರೆ.

**4. Good Life is built with good relationships**

ಈ **statement ಸ್ವಲ್ಪ misleading ಅಲ್ಲವೆ**? ಏನಿದರರ್ಥ? ಇಲಿ Good life ಮತ್ತು good relationshipU¼ ಮಧ್ಯೆ ಒಂದು ಪದವಿದೆ. ಗಮನಿಸಬೇಕಾದ ಆ ಪದ 'built'. ನಾವು ಸಂಬಂಧಗಳನ್ನು ತುಂಬಾ ಶ್ರದ್ಧೆಯಿಂದ ಕಟ್ಟಿಕೊಳ್ಳಬೇಕಾಗುತ್ತದೆ, ಸಂಬಂಧಗಳನ್ನು ಬೆಳೆಸಬೇಕಾಗುತ್ತದೆ. ಸಂಬಂಧ ಅಂದರೆ ಸಲೀಸಾಗಿರುವುದಿಲ್ಲ, ಕಷ್ಟ, ನಷ್ಟ, ನೋವು, ಮನಸ್ತಾಪ ಎಲ್ಲವೂ ಇರುತ್ತದೆ. ಅದನ್ನು ನಿಭಾಯಿಸಬೇಕಾಗುತ್ತದೆ. ನಮಗೆ ಬೇಕಾದ ಸಂಬಂಧವನ್ನು ಇನ್ನೊಬ್ಬರು ಬೆಳೆಸಲು ಆಗುವುದಿಲ್ಲ. ನಾವೇ ನೀರುಹಾಕಿ, ಗೊಬ್ಬರಹಾಕಿ, ಅಗತ್ಯವಾದ ಎಲ್ಲ ಬಿಸಿಲು, ಬೆಳಕು, ಮಳೆ, ಗಾಳಿಗಳನ್ನು ಒದಗಿಸಿ, ನಾಶದಿಂದ ರಕ್ಷಿಸಿ ಕಾಪಾಡಬೇಕಾಗುತ್ತದೆ. ಅಂದರೆ ಇದು 24x7ರ ಜಾಗೃತಿಯಲ್ಲಿ ಸದಾ ಪೋಷಿಸಬೇಕಾದ್ದು. ಅದನ್ನು ಆನಂದಿಸುವುದಷ್ಟೆ ಅದರ ಫಲ!

Study ಅನೇಕ ವಿಚಾರಗಳನ್ನು ಒಳಗೊಂಡಿದೆ. ಆದರೆ ರೋಬರ್ಟ್ ಹೇಳಿರುವ ಪ್ರಮುಖ ನಾಲ್ಕು ವಿಷಯಗ ಮೇಲೆ ಉಲ್ಲೇಖಿಸಿದವು. ನಾವು ಅವನ್ನು ನಮ್ಮ ಜೀವನದಲ್ಲಿ ಇಟ್ಟು ನೋಡಿದ್ದಾದರೆ ಹೇಗೆ ಕಾಣುತ್ತದೆ? ನಮ್ಮ Friends ಮತ್ತು ಸಂಬಂಧಿಕರಿಗೆ ಸಾಕಷ್ಟು ಸಮಯ ಕೊಡುತ್ತೇವಾ? ಇದ್ದ ಜಾಗದಲ್ಲಿ ಹೊಸ ಸಂಬಂಧಗಳನ್ನು ಮಾಡುತ್ತೇವಾ? ಅದನ್ನು ಪ್ರೀತಿಯಿಂದ ಕಾಳಜಿಯಿಂದ ಬೆಳೆಸುತ್ತೇವಾ? ಎಷ್ಟು ಸಮಯ ಬೇರೆಯವರಿಗಾಗಿ ನಾವು ಹಾಕುತ್ತೇವೆ? ............... ಇದು ಯೋಚಿಸಬೇಕಾದ ವಿಷಯ.

ನನಗೆ ಚಂದು ಅಜ್ಜ ಇಷ್ಟ ಆಗುವುದು ಇದಕ್ಕೆ. ಅವರು ತುಂಬಾ ಬೇಗ **'ಸಂಬಂಧ'**ದ ಮಹತ್ವವನ್ನು ಅರಿತರು. ಆಮೇಲೆ ಬೇರೆಯವರ ಒಳಿತಿಗೆ, ಬೇರೆಯವರೊಂದಿಗೆ ಕಾಲ ಕಳೆಯಲು ಪ್ರಾರಂಭಿಸಿದರು. ಎರಡು ಕಾಲಗಳನ್ನು ಮುರಿದುಕೊಂಡು ಮನೆಯಲ್ಲಿ ಬಿದ್ದಾಗ ದುಃಖಿಸುವುದು ಬಿಟ್ಟು ಮುರಿದ ಕೈ ಕಾಲು, ಕಟ್ಟುವುದಕ್ಕೆ ಕಲಿತರು. ಆ ಮೇಲೆ ಸಾಯುವ ತನಕ ಬೇರೆಯವರ ಮುರಿದ ಕೈಕಾಲುಗಳನ್ನು ಕಟ್ಟುವ ಸೇವೆ ಮಾಡುತ್ತಿದ್ದರು. ನನ್ನ ಮೇಲೆ ಪ್ರಭಾವ ಬೀರುವ ಅವರ ಮತ್ತೊಂದು ವಿಷಯವಿದು: ಅವರು ಕೆಳವರ್ಗದ ಪರ ನಿಂತು ನ್ಯಾಯ ಮಾಡುತ್ತಿದ್ದರು. ಆಳುವ ವರ್ಗದ ಬೆದರಿಕೆ, ದರ್ಪ, ಹಿಂಸೆ ಎಲ್ಲವನ್ನು ಅವರಿಗೆ ಒಂದು ಮಟ್ಟದಲ್ಲಿ ಹದವಾಗಿ ನಿಭಾಯಿಸುವುದು ಸಾಧ್ಯವಾಗಿತ್ತು. ಬಹುಶಃ ಸಂಬಂಧಗಳ ನಿರ್ವಹಣೆಯ ಮೇಲೆಯೇ ಆ ಹದವನ್ನು ಅವರು ತಮ್ಮದಾಗಿಸಿಕೊಂಡಿದ್ದರು. ಸಂಬಂಧಗಳ ಬಲದ ಮೇಲೆ ಅವರು ಹೆಚ್ಚು ಅಹಿತಕರ ಘಟನೆಗಳು ನಡೆಯದಂತೆ ನೋಡಿಕೊಳ್ಳುತ್ತಿದ್ದರು.

'ಸಂಬಂಧ ದೊಡ್ಡದು', ಎಷ್ಟು ಸರಳವಾದ ಮಾತು, ಎಷ್ಟು ಮುಖ್ಯವಾದ ಮಾತು. ಎಲ್ಲರಿಗೂ ಗೊತ್ತಿರುವ ವಿಷಯವಾದರೂ ಎಲ್ಲರಿಂದ ಪಾಲಿಸಲಾಗದಿರುವ ವಿಷಯ. ಹಾಗೆ ನೋಡಿದರೆ, **'ಒಳ್ಳೆಯ ಸಂಬಂಧ'ದಲ್ಲಿ** ಇಡೀ ನಮ್ಮ ಭವಿಷ್ಯ ನಿಂತಿದೆ! ಬನ್ನಿ ಇದ್ದ ಸಂಬಂಧಗಳನ್ನು ಗಟ್ಟಿ ಮಾಡೋಣ, ಕಳಚಿ ಬಿದ್ದಿರುವ ಸಂಬಂಧಗಳನ್ನು ಎದ್ದು ನಿಲ್ಲಿಸೋಣ. ಹೊಸ ಸಂಬಂಧಗಳನ್ನು ಪ್ರಾರಂಭಿಸೋಣ, ಪ್ರಾಮಾಣಿಕವಾಗಿ ಪ್ರೀತಿಸೋಣ, ಸಂಬಂಧ ಬೆಳೆಸೋಣ.

## ಸಲಾಕೆ... - ಸಲಿಗೆಯಾಕೆ..??? - ಶ್ರೀನಿವಾಸ ರಾವ್ ಎಸ್. ಪಿ

ಕಾದ ಕಬ್ಬಿಣದ ಸಲಾಕೆಯನು ಹಿಡಿದು
ಬಡಿದು ಬಗ್ಗಿಸಬೇಕು ಕಾವು ಹಾರುವ ಮುನ್ನ.....
ಆ ತೋಳಲಿರುವ ಶಕ್ತಿ
ಮಾಸಿಹೋಗುವ ಮುನ್ನ...
ಹಿಡಿದ ಕಪಿಮುಷ್ಟಿಯು
ಸಡಿಲವಾಗುವ ಮುನ್ನ.....!!?? ಗಮನ ತೀರುವ ಮುನ್ನ...!!???

ಕೆಂಪು ಕೆಂಡದ ಕೆನ್ನಾಲಿಗೆಯು ಚಾಚಿದೆ
ಅಬ್ಬರಿಸಿ-ಬೊಬ್ಬಿರಿದು ಸುಟ್ಟುಹಾಕಲು ಬಯಸಿದೆ
ಬಯಸಿಬಂದ ಭೂತ ಬೆನ್ನೇರಿ
ಬೆಚ್ಚಿಬೀಳಿಸಹೊರಟಿದೆ...!!??
ಹೊರಟನಿಂದ ಭೂತಕೆ ಕೂಳಾಗುವಾ ಮುನ್ನ
ಕಂಡುಬಿಡೋ ಒಂದೊಮ್ಮೆ ನಿನ್ನ.....???

ಎಲ್ಲವೂ ಎಲ್ಲರಂತಲ್ಲ...
ಎಲ್ಲರೂ ನಿನ್ನಂತಲ್ಲ...
ನಿಂತಲ್ಲಿ ನಿಲುವುದು ತರವಲ್ಲ...
ಅದು ತರುವುದು ಸುಖವಲ್ಲ...!!???
ಸುಖದ ಹಾದಿ ಹಿಡಿದು ನಿಲಬೇಡ...
ನಿಂತ ನೀರಾಗಬೇಡ...
ನೀ ಜಡವಾಗಬೇಡ....???

## ಕನ್ನಡ ನಾಡು ನುಡಿ - ಅಶ್ವಿನಿ ಎಸ್

ಕನ್ನಡವೆಂದರೆ ಕೇವಲ ಒಂದು ಭಾಷೆಯಲ್ಲ, ಈ ನಾಡಿನಲ್ಲಿ ವಾಸಿಸುತ್ತಿರುವ ಜನ ಸಮುದಾಯದ ಬದುಕು ಕೂಡಾ ಆಗಿದೆ. ಭಾಷೆಯೆಂಬುದು ಕೇವಲ ಮಾಧ್ಯಮವಷ್ಟೇ ಅಲ್ಲ. ಅದು ಸಂಸ್ಕೃತಿಯ ಪ್ರತೀಕವೂ ಆಗಿದೆ. ನುಡಿದರೆ ಮುತ್ತಿನ ಹಾರದಂತಿರಬೇಕೆಂದು ಬಸವಣ್ಣನವರು ಹೇಳಿರುವ ಮಾತು ಈ ಸಂದರ್ಭದಲ್ಲಿ ನೆನೆಸಿಕೊಳ್ಳಬೇಕು.

ನಮ್ಮ ನಾಡಿನ ಬಗ್ಗೆ, ನುಡಿಯ ಬಗ್ಗೆ ಉಲ್ಲೇಖ ದೊರೆತಿರುವ ಶಾಸನ ಹಲ್ಮಿಡಿ ಶಾಸನವಾಗಿದೆ. ಈ ಶಾಸನವು ಕನ್ನಡದ ಪ್ರಾಚೀನತೆಯನ್ನು ಗುರುತಿಸಲು ಕನ್ನಡದ ಸಂಸ್ಕೃತಿ ಹೇಗಿತ್ತು ಎಂಬುದರ ಬಗೆಗೆ ತಿಳಿದುಕೊಳ್ಳಲು ಈ ಶಾಸನ ಸಹಾಯಕಾರಿ. ಸುಮಾರು ಕ್ರಿ.ಶ 450ರಲ್ಲಿ ಈ ಶಾಸನ ಸಿಕ್ಕಿದೆ. ಮೃಗೇಶ ಮತ್ತು ನಾಗ ಎಂಬುವವರು ಯುದ್ಧದಲ್ಲಿ ಹೋರಾಡಿ ಜಯಗಳಿಸಿದ, ವಿಜರಸ ಎಂಬುವವನಿಗೆ ಎರಡು ಗ್ರಾಮಗಳನ್ನು ಕೊಡುಗೆಯಾಗಿ ಕೊಟ್ಟದ್ದು ಈ ಶಾಸನದ ವಿಷಯ. ಪೂರ್ವದ ಹಳಗನ್ನಡ ಪದಗಳಾದಂತಹ **ನಾಡುಳ್, ಕೇಳ್ದೋನ್, ವಿಟ್ಟಾರ್, ಪೆತ್ತಜಯನ್'** ಎಂಬಂತಹ ಪದಗಳು ಈ ಶಾಸನದಲ್ಲಿವೆ. ಹೀಗಾಗಿ ಭಾಷೆಯ ದೃಷ್ಟಿಯಿಂದ ಈ ಶಾಸನ ಕನ್ನಡದ ಮೊದಲ ಶಾಸನವಾಗಿದೆ.

ನಂತರದಲ್ಲಿ ಬಾದಾಮಿಯಲ್ಲಿ ದೊರಕಿರುವ ಕಪ್ಪೆ ಅರಭಟ್ಟನ ಶಾಸನದಲ್ಲಿ ಮೊಟ್ಟಮೊದಲಿಗೆ ಕನ್ನಡದ ತ್ರಿಪದಿ ಎಂಬ ಛಂದೋಪ್ರಕಾರ ಸಿಗುತ್ತದೆ. ಸಾಹಿತ್ಯ ದೃಷ್ಟಿಯಿಂದ ಇದು ಪ್ರಮುಖವಾಗಿದೆ.

**'ಸಾದುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ**
**ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ್**
**ಮಾಧವನೀತನ್ ಪೆರನಲ್ಲ'**

ಕನ್ನಡಿಗರು ಹೇಗೆ ಸ್ವಾಭಿಮಾನಿಗಳಾಗಿದ್ದರೆಂಬುದನ್ನು ಈ ಶಾಸನ ಹೇಳುತ್ತದೆ. ಒಳ್ಳೆಯವರಿಗೆ ಒಳ್ಳೆಯವರಾಗಿ, ತೊಂದರೆ ಕೊಡುವ ಕಲಿಗಳಿಗೆ ಕಲಿಯ ವಿಪರೀತರಾಗಿ ಕಂಡಿದ್ದಾನೆ.

ವಿಜಯನಗರದ ಪ್ರೌಢದೇವರಾಯನ ಕಾಲದ ಹಂಪಿಯ ಶಾಸನವೊಂದು ಇಂದಿಗೂ ಪ್ರಸ್ತುತವೆನಿಸುತ್ತದೆ. ಪ್ರೌಢದೇವರಾಯನಿಗೆ ಲಕ್ಷ್ಮೀಧರಮಾತ್ಯನೆಂಬ ಮಂತ್ರಿಯಿದ್ದ. ಈ ಲಕ್ಷ್ಮೀಧರಾ ಮಗುವಾಗಿದ್ದಾಗ ಆತನ ತಾಯಿಯು ಹಾಲೆರೆಯುತ್ತಾ ಹೇಳಿದ ಮಾತುಗಳು ಈ ಶಾಸನದಲ್ಲಿವೆ. 'ಕೆರೆಯಂ ಕಟ್ಟಿಸು, ಬಾವಿಯಂ ಸವೆಸು, ದೇವಾಗಾರಂ ಮಾಡಿಸು' ಎಂದು ತಿಳಿಸಿದ ಅಂಶಗಳಿವೆ. ತನ್ನ ಮಗು ಜನಹಿತ ಕಾರ್ಯಗಳನ್ನು ಮಾಡಬೇಕೆಂದು ತಾಯಿ ಮೌಲಿಕ ನುಡಿಗಳನ್ನು ತಿಳಿಸಿದ್ದಾಳೆ. ಇದು ಕನ್ನಡಿಗರ ಹೆಮ್ಮೆಯ, ಸಂಸ್ಕೃತಿಗೆ ಸಾಕ್ಷಿಯಾಗಿದೆ.
ನಂತರ ಕನ್ನಡದ ಮೊಟ್ಟಮೊದಲ ಕೃತಿಯಾದ ಕವಿರಾಜಮಾರ್ಗದಲ್ಲಿ ಶ್ರೀವಿಜಯನು ಕರ್ನಾಟಕದವರು ಎಂತಹ ಉದಾರಿಗಳು ಸೌಜನ್ಯಶೀಲರು ಎಂಬುದರ ಕುರಿತು ಮಹತ್ವದ ಮಾತುಗಳನ್ನಾಡಿದ್ದಾರೆ. ಕ್ರಿ.ಶ 850 ರಲ್ಲಿ ರಚಿಸಲಾದ ಕವಿರಾಜಮಾರ್ಗ ಕನ್ನಡದ ಮೊದಲ ಕೃತಿ.

'ಕಾವೇರಿಯಿಂದಮಾ ಗೋದಾವರಿಯವರೆಗೆ' ಕನ್ನಡ ನಾಡು ಹಬ್ಬಿತ್ತು. ಅಲ್ಲಿಯವರೆಗೆ ಗಡಿಗಳನ್ನು ಹೊಂದಿತ್ತು ಎಂದು ಕವಿ ತಿಳಿಸಿದ್ದಾನೆ. ಹಾಗೆಯೇ ಇಲ್ಲಿನ ಜನರು 'ಕುರಿತೋದದೆಯಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದು ಹೊಗಳಿರುವ ಮಾತು ಮಹತ್ವದ್ದಾಗಿದೆ. ಉದ್ದೇಶಪೂರ್ವಕವಾಗಿ ಓದದಿದ್ದರೂ ಇವರು ಕಾವ್ಯ ರಚಿಸುವ ಶಕ್ತಿ ಹೊಂದಿದ್ದಾರೆಂದು ಕನ್ನಡ ಜನಪದರನ್ನು ಇಲ್ಲಿ ವರ್ಣಿಸಿದ್ದಾನೆ.

**'ಸುಭಟರ್ಕಳ್ ಸುಪ್ರಭುಗಳ್ ಚೆಲ್ವರ್ಕಳಭಿಜನರ್ಕಳ್**
**ಗುಣಿಗಳ್ ಅಭಿಮಾನಿಗಳತ್ಯುಗ್ರರ್**
**ಗಭೀರಚಿತ್ತರ್ ವಿವೇಕಿಗಳ್ ನಾಡವರ್ಗಳ್'**

ಕವಿರಾಜಮಾರ್ಗಕಾರ ನಾಡಿನ ಜನರನ್ನು ಹೇಗಿದ್ದರೆಂಬುದನ್ನು ಹೆಮ್ಮೆಯಿಂದ ಹೇಳಿದ್ದಾನೆ. ವೀರರು, ಕವಿಗಳು, ಒಳ್ಳೆಯವರು, ಚೆಲುವುಳ್ಳವರು, ಗುಣವಂತರು, ಅಭಿಮಾನಿಗಳು, ಗಂಭೀರ ಸ್ವಭಾವದವರು, ವಿವೇಕಿಗಳು ಆಗಿದ್ದರೆಂದು ತಿಳಿಸಿದ್ದಾನೆ.
ಕನ್ನಡ ನಾಡನ್ನು ಮತ್ತು ಕನ್ನಡಿಗರನ್ನು ಕುರಿತು ಅಭಿಮಾನದಿಂದ ಕವಿ ಹೇಳಿದ್ದಾನೆ. **ಪುಲಿಗೆರೆ (ಲಕ್ಷ್ಮೇಶ್ವರ), ಕಿಸುವೊಳಲ್ (ಪಟ್ಟದಕಲ್ಲು), ಕೊಪಣನಗರ( ಕೊಪ್ಪಳ),ಒಕ್ಕುಂದ ( ಬೆಳಗಾವಿ ಸಮೀಪ)**ಗಳ ನಡುವಿನ ನಾಡನ್ನು ತಿರುಳ್ಗನ್ನಡ ನಾಡೆಂದು ವಿವರಿಸಿದ್ದಾನೆ. ಉಳಿದೆಲ್ಲೆಡೆ ಒಳನುಡಿ ಇದೆಯೆಂದು ತಿಳಿಸಿದ್ದಾನೆ.

ಕನ್ನಡದ ಆದಿಕವಿ ಪಂಪ. ಹತ್ತನೇ ಶತಮಾನದಲ್ಲಿ ಜೀವಿಸಿದ್ದ ಕವಿ. ಪಂಪನ ಊರು ವೆಂಗಪೊಳು, ಆದರೂ ಅವನ ನೆನವೆಲ್ಲಾ ಬನವಾಸಿ ದೇಶದಲ್ಲಿ. '**ಆರಂಕುಶವಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಮಂ'** ಎಂದು ಹೇಳಿದ್ದಾನೆ.ಯಾರೇ ಅಂಕುಶವಿಟ್ಟು ತಿವಿದರೂ ನನ್ನ ಮನಸ್ಸು ಸದಾ ಬನವಾಸಿ ದೇಶವನ್ನು ನೆನಪಿಸುತ್ತಿರುತ್ತದೆಂದು ಹಾಗೂ ಬನವಾಸಿ ದೇಶದಲ್ಲಿಯೇ ಹುಟ್ಟಿ ಬರಬೇಕೆಂದು ಕೇಳಿಕೊಳ್ಳುವ ಆಸೆ ಹೊಂದಿದ್ದನು. ಇದರಿಂದಾಗಿಯೇ ತಿಳಿಯುವುದು ಬನವಾಸಿ ದೇಶ ಎಷ್ಟು ಮಹತ್ವ ಪಡೆದಿತ್ತು ಎಂಬುದಾಗಿ.
ಹಾಗೆಯೇ ವಡ್ಡಾರಾಧನೆಯ ಕರ್ತೃಗಳಾದ 'ಶಿವಕೋಟ್ಯಾಚಾರ್ಯರು ಜಂಬೂದ್ವೀಪದ ಭರತ ಕ್ಷೇತ್ರದಲ್ಲಿ ಎಂದೂ ಕನ್ನಡ ನಾಡಿನ ಪ್ರಸ್ತಾಪಗಳು ಬರುವುದನ್ನು ಗಮನಿಸಬಹುದು. ಹೀಗೆ ಪ್ರಾಚೀನ ಕಾಲದಿಂದ ಹಲವು ಕವಿಗಳು ಕನ್ನಡ ನಾಡಿನ,ನುಡಿಯ ಬಗ್ಗೆ ಹೆಮ್ಮೆಯಿಂದ ವರ್ಣಿಸಿದ್ದಾರೆ.

## ಸದ್ಯ ಮಲೆನಾಡು —ರಕ್ಷಿತ್ ಅರುಣ್

ಮಲ್ನಾಡಲ್ಲಿ ಛತ್ರಿ ರಿಪೇರಿಯವ್ರು ಕಾಣ್ಸಕೊಂಡು, ಹಂಚಿನ ಮಾಡು ಸೋರ್ತು ಅಂದ್ರೆ ಮಳೆಗಾಲ ಶುರು ಆಯ್ತುಯ ಅಂತ ಅರ್ಥ.

ಮಳೆಗಾಲದ ಬ್ಯುಸಿ ಮನುಷ್ಯರು ಕರೆಂಟ್ನೋರು, ಈ ಟೈಮಲ್ಲಿ ಲೈನ್ ಮ್ಯಾನ್‌ಗಳನ್ನು (ಈಗ ಇವರನ್ನ ಸರ್ಕಾರ ಪವರ್‌ಮ್ಯಾನಗಳೆಂದು ಕರೆಯುತ್ತಿದೆ) ಮಾತಾಡ್ಸೊಕೆ ಆಗ್ತಾ ಇರಲ್ಲ, ಕಟ್ಟಿಂಗ್ ಪ್ಲೆಯರ್ ಜೊತೆ ಕತ್ತಿ ಕೊಡ್ಲಿ ಇಟ್ಕೊಂಡೆ ಓಡಾಡ್ತಾ ಇರ್ತಾರೆ. ಬುಡ ಮೇಲಾಗಿ ಬೀಳುವ ಎಷ್ಟೋ ಮರಗಳು ಸಾಲು ಸಾಲು ಕರೆಂಟು ಕಂಬಗಳ ತಲೆಯನ್ನೇ ಪುಡಿ ಮಾಡಿರ್ತವೆ.

ಡ್ಯಾಮಲ್ಲಿ ನೀರಿಲ್ದೆ ಬೇಸ್ಗೆಲಿ ಕಣ್ಣು ಮುಚ್ಚಾಲೆ ಆಡ್ತಾ ಇದ್ದ ಕರೆಂಟ್! ಮಳೆಗಾಲದಲ್ಲಿ ಕಂಪ್ಲೀಟ್ ಕಣ್ ಮುಚ್ಚಿರುತ್ತೆ"
ಕಿವಿಗೆ ಪೋನ್ ಇಟ್ರೆ ಮುಖ ಕಾಣ್ದಿರೊ ಹೊಸ ದೊಡ್ಡ ಮೊಬೈಲ್ಗಳು ಚಾರ್ಜ್ ಇಲ್ದೆ ವಿಲವಿಲ ಒದ್ದಾಡಿ ಪ್ರಾಣ ಬಿಟ್ಟಿರ್ತವೆ, ಅರೆ ಜೀವದಲ್ಲಿದ್ದ ನೋಕಿಯಾ ಹಳೆ ಸೆಟ್ಗಳೇ ಆಗ ನಿಜಕ್ಕೂ ಒಡೆಯನ ಸೇವೆ ಮಾಡೋದು.

ಮೇ ಮತ್ತು ಜೂನ್ ಮೀನು ಮೊಟ್ಟೆ ಇಡೋ ಕಾಲ, ಹೊಸ ನೀರು ಹೊಳೆ ಸೇರುವಾಗ ಗರ್ಭಿಣಿ ಮೀನುಗಳು ನೀರಿನ ವಿರುದ್ದ ದಿಕ್ಕಿಗೆ ಈಜಿ, ತೋಟ ಗದ್ದೆಗಳ ಕಡಿಮೆ ನೀರಿನಲ್ಲಿ ಸೇರಿ ಮೊಟ್ಟೆ ಇಡೋಕೆ ಶುರು ಮಾಡ್ತವೆ, (ಆ ರೀತಿ ಮೀನು ಬರೋದನ್ನ ಮಲ್ನಾಡಿನ ಭಾಷೇಲಿ ಮೀನ್ ಹತ್ತೋದು ಅಂತಾರೆ) ಹಂಗ್ ಬಂದ ಮೀನುಗಳನ್ನು ಕತ್ತಿ, ಬಲೆ, ಕೂಣಿ ಮುಖಾಂತರ ಮನೆ ಪಾತ್ರೆ ಸೇರೋ ಹಾಗೆ ಮಾಡ್ತಾರೆ.

ಕಾಫಿ ಲೋಟದ ಸೈಜು ಮಳೆಗಾಲದಲ್ಲಿ ಸ್ವಲ್ಪ ದೊಡ್ಡ ಆಗುತ್ತೆ, ಮನೆಗಳಲ್ಲಿ ವಾರಕ್ಕೆ 3 ಸತಿ ಹಲ್ಸಿನ ಹಣ್ಣಿನ ದೋಸೆ, ಇಡ್ಲಿ, ಕೊಟ್ಟೆ ಕಡ್ಬುಗಳದ್ದೆ ಹಬ್ಬ. ಶೀತ ಮತ್ತು ಜ್ವರ ಅಜ್ಜನ ಮನೆಗೆ ಬಂದ ಮೊಮ್ಮಕ್ಕಳ ತರ ಹೋಗೋಕೂ ಮನ್ಸಿಲ್ದೆ, ಇರೋಕೂ ಮನ್ಸಿಲ್ದೆ ಒದ್ದಾಡ್ತಾ ಇರ್ತವೆ" ತೋಟ ಗದ್ದೆ ಅಥವಾ ಹೊಳೆ ಸೈಡಲ್ಲಿ ಇಂಬಳ (ಜಿಗಣೆ) ಹತ್ರ ಕಚ್ಚಿಸ್ಕೊಳ್ತಾ ಕಾಡಿನ ಮಧ್ಯೆ ದೇವರ್ (ಧೈರ್ಯ್ದ) ಹರಕೆಗಳು ಶುರು ಆಗ್ತಾವೆ. ಮಳೆಗಾಲದಲ್ಲಿ ಜಾನುವಾರುಗಳು ಹಲಸಿನ ಹಣ್ಣಿನ ಮರದ ಬುಡದಲ್ಲಿ ಇರ್ತವೆ, ಅದ್ಕೆ ಈ ಟೈಮು ಅವುಗಳ ಹಾಲು ಹಲಸಿನ ಹಣ್ಣಿನ ವಾಸ್ನೆ ಇರುತ್ತೆ. ಭಯಂಕರ ಮಳೆಯ ಕಾರಣದಿಂದ ಆಗಾಗ ಶಾಲೆಗಳಲ್ಲಿ ರಜೆ ಘೋಷಣೆ ಆಗ್ತಾ ಇರುತ್ತೆ, ಆದ್ರೆ ರಜಾ ಕೊಟ್ಟ ದಿನ ಮಳೆ ಕಡಿಮೆ ಆಗಿ, ಮತ್ತೆ ಶಾಲೆ ಶುರುವಾದಾಗ ಮಳೆನೂ ಶುರುವಾಗುತ್ತೆ. ರಾತ್ರಿ ಜೋರಾಗಿ ಗಾಳಿ ಬಂದ್ರೆ ಮರು ದಿನ ಬೆಳಗ್ಗೆ ಜನ ಎಲ್ಲಾರ ಮನೆ ಅಡಿಕೆ ತೋಟನೂ ಸುತ್ತಾಡಿ ಬರ್ತರೆ, ಯಾರ್ ಯಾರ್ ತೋಟದಲ್ಲಿ ಎಷ್ಟು ಅಡಿಕೆ ಮರ ಬಿದ್ದಿದ್ದಾವೆ ಅಂತ ಲೆಕ್ಕ ಮಾಡೋಕೆ.

ನಮ್ಮಂತವರು ಈ ತರ ಸ್ಟೇಟಸ್ ಹಾಕೋಕೆ ಸುಮ್ನೆ ನಿಂತ ಕಾರಿನ ಬ್ಯಾಟ್ರಿನೆಲ್ಲಾ ಖಾಲಿ ಮಾಡಿರ್ತಿವಿ.

## ಅವು ಪುಸ್ತಕಗಳಲ್ಲ ಮನಸುಗಳು...! -ಮಂಜುನಾಥ್ ಎ.ಆರ್

ಎಷ್ಟೋ ಬಾರಿ ನಾವು ನಮ್ಮ ಗ್ರಂಥಾಲಯಗಳಲ್ಲಿರುವ ಪುಸ್ತಕಗಳನ್ನು ಸಾಮಾನ್ಯವಾದ ವಸ್ತುಗಳೆಂದು ಭಾವಿಸುತ್ತೇವೆ. ಆದರೆ ಕಾಯ್ಕಿಣಿಯಂತವರಿಗೆ ಮಾತ್ರ ಅವು ಮನಸುಗಳಂತೆ! ಅವರ ಈ ಮಾತು ಈ ನನ್ನ ಬರವಣಿಗೆಗೆ ಕಾರಣವಾಯಿತು. ಎಷ್ಟೋ ಬಾರಿ ಮನೆಲಿರುವ ಹಳೆ ಕಪಾಟುವಿನೊಳಗೆ ಬೆಚ್ಚಗೆ ಕೂತ ಪುಸ್ತಕಗಳ ದೂಳು ಹಳೆಯದು ಎಂದು ಈಗೀಗ ನನಗೆ ಅನಿಸುತ್ತಿಲ್ಲ. ಈ ನಡುವೆ ನನ್ನ ಮನಸ್ಸು ತೆರೆದ ಪುಸ್ತಕವಾಗಿಬಿಟ್ಟದೆ. ನಾನು ಅವುಗಳನ್ನು ನೋಡಿದಾಗೆಲ್ಲಾ ಮಿಸ್ ಯೂ ಅನ್ನೋ ಪದ ಕಪಾಟುವಿನಿಂದ ಕೇಳಿ ಬರುತ್ತಿತ್ತು. ಆದರೂ ಓದು ಬಿಟ್ಟು ಬರೋಬರಿ ಎರಡು ವರ್ಷಗಳ ಮೇಲೆ ಒಂಬತ್ತು ತಿಂಗಳಾಗಿತ್ತು. ನನಗೂ ಓದಬೇಕು ಅನಿಸಿಯೇ ಇರಲ್ಲಿಲ್ಲ. **ನೆನಪು ಆರಿದೆ! ಯಾವುದೋ ಹಬ್ಬದ ಮರು ದಿನ** ಸುಮಾರು ಎಂಟು ತಿಂಗಳ ಹಿಂದಿರಬೇಕು ನಾನು ಆಕಳಿಸುತ್ತಾ, ಕಣ್ಣುಜ್ಜುತ್ತಾ ಆಗ ತಾನೇ ಎದ್ದಿದ್ದೆ. ಬೆಳಗಿನ ಅಮ್ಮನ ಮಾತುಗಳು ಸುಪ್ರಭಾತದಂತೆ ಕಿವಿ ರಾಚುತ್ತಿದ್ದವು ಅದರಲ್ಲಿನ ಒಂದು ಕೋಟೆಡ್ ಲೈನ್-**"ಇಡಿ ಜಗತ್ತನ್ನು ತಿರುಚುವಷ್ಟು ತಾಕತ್ತು ಪುಸ್ತಕಕ್ಕಿದೆ, ನೀನು ಪುಸ್ತಕವನ್ನು ತಿರುಚಿಲ್ಲವಾದರೆ ಪುಸ್ತಕ ನಿನ್ನನ್ನು ತಿರುಚುತ್ತದೆ. ಆಮೇಲೆ ಯಾವತ್ತು ನೀನು ಎಂದಿಗೂ ತೆರೆದುಕೊಳ್ಳಲಾರೆ."** ಯಾಕೆ ಎನ್ನುವಷ್ಟರಲ್ಲಿ ನೆನಪಾಯಿತು. ನಾನು ರಾತ್ರಿ ರೂಂನಲ್ಲಿ ಕೆದರಿದ ಹಳೆಯ ಪುಸ್ತಕಗಳ ರಾಶಿ ನೋಡಿ ಅಮ್ಮನಿಗೆ ಒಂದಿಷ್ಟು ಕೋಪ ಬಂದಿತ್ತೆಂದು ಆಮೇಲೆ ಗೊತ್ತಾಯಿತು. ಅಷ್ಟಕ್ಕೂ ನಮ್ಮಮ್ಮ ಎಂದು ಶಾಲೆಗೆ ಹೋಗದೆ, ನನಗೆ ಪುಣ್ಯಕೋಟಿ ಹಾಡು ಕಲಿಸಿದ ಟೀಚರ್ ಎಂಬುದನ್ನು ನನ್ನ ಬಾಲ್ಯದ ನೆನಪು ಮರೆಯೋದಿಲ್ಲ. ಆಗಲೇ ನಾನು ಇಂದಿಗೂ ನನ್ನ ಹಳೆ ಬಾಡಿಗೆ ಮನೆಯ ಅಟ್ಟದಲ್ಲಿ ಕಟ್ಟಿಟ್ಟ ಪುಸ್ತಕದ ಚೀಲದ ನೆನಪು ಬಂದದ್ದು. ಆವತ್ತು ರಾತ್ರಿ ಆ ಚೀಲದಲ್ಲಿ ಯಾವ್ಯಾವ ಪುಸ್ತಕಗಳಿವೆ ಎಂಬ ಕುತೂಹಲ ನಿದ್ದೆಗೆ ಎಳ್ಳು ನೀರು ಬಿಟ್ಟಿತ್ತು. ಅವುಗಳಲ್ಲಿ ನನ್ನ ಬಾಲ್ಯದ ಬದುಕುಗಳಿವೆ, ನೆನೆಪುಗಳಿವೆ.



ಆ ಪುಸ್ತಕಗಳನ್ನು ತೆರೆದಾಗಲೇ ಅವುಗಳೊಂದಿಗಿನ ನೆನೆಪುಗಳು, ಮನಸಿನ ಪುಟಗಳಲ್ಲಿ ಗರಿ ಬಿಚ್ಚಿದ ಹಕ್ಕಿಯಂತೆ ತೆರೆದು ಹಾರತೊಡಗಿದವು. ಅವುಗಳಲ್ಲಿ ಅನೇಕ ಪುಟ್ಟವಿಟ್ಟ ಮನಸುಗಳಿವೆ. ಅವುಗಳು ನಾವೆಂದಿಗೂ ತೆರೆದು ನೋಡಲಾಗದಂತಹ ಮನಸುಗಳು, ಬದುಕಿನಲ್ಲಿ ಅನೇಕ ಮನಸುಗಳು(ಮನುಷ್ಯರು) ಪರಿಚಯವಾದಂತೆ, ನಮಗೆ ದಿನ ನಿತ್ಯವೂ ಪುಸ್ತಕಗಳ/ ವಿಚಾರಗಳ/ ಸಿದ್ಧಾಂತಗಳ ಪರಿಚಯವೂ ಆಗುತ್ತಲೆ ಇರುತ್ತದೆ. ಅವುಗಳಲ್ಲಿ ಕೆಲವು ಅರ್ಥವಾಗುತ್ತವೆ, ಮತ್ತೆ ಕೆಲವು ಪ್ರಶ್ನೆಯಾಗುತ್ತವೆ. ಮತ್ತೆ ಕೆಲವನ್ನು ನಮ್ಮ


ಮನಸು ಒಪ್ಪದೆ ತಿರಸ್ಕರಿಸಿಬಿಡುತ್ತದೆ. ಅಂತವನ್ನು ನಾವು ಪರಿಗಣಿಸುವುದಿಲ್ಲ ಇನ್ನು ಕೆಲವು ಮನಸುಗಳು ನಮ್ಮನ್ನು ದೂರುತ್ತವೆ. ನಮಗೆ ಇದಾವುದು ಅರ್ಥವಾಗುವುದೇ ಇಲ್ಲ. ಇಲ್ಲಿನ ಒಂದು ಸಂಗತಿಯೆಂದರೆ **"ಪರಿಗಣಿಸುವುದು ಮತ್ತು ಅರ್ಥ ಮಾಡಿಕೊಳ್ಳುವುದು-ಅಷ್ಟೇ ಅಲ್ಲವೇ ಬದುಕು"** ಎಷ್ಟೋ ಸಾರಿ ಕೆಲ ಪುಸ್ತಕಗಳು ನಮಗೆ ಅರ್ಧದಷ್ಟು ಓದಿದ ನಂತರ ಮಾತ್ರ ತಿಳಿಯಾಗುತ್ತದೆ. ಅವು ಪುಸಕ್ತದ ಮಧ್ಯ ನಾವು ಬಿಟ್ಟ ಬೆರಳಿನ ಗುರುತುಗಳು. ಯಾರೋ ಕೊಟ್ಟ ನವಿಲುಗರಿಯ ನೆನಪುಗಳು ನಮ್ಮ ಮನಸುಗಳಿಗೆ ಓದಿನ ಸುಖ ನೀಡುತ್ತವೆ. ನಮಗೆ ***ಓದೇ*** ಮೋಕ್ಷ. ಏಕೆಂದರೆ ಅವು ನಮ್ಮನ್ನು ಜ್ಞಾನಕ್ಕೆ ಮುಕ್ತವಾಗಿ ತೆರೆಯುತ್ತವೆ.........ತೆರೆದಿವೆ...... ತೆರೆದ ಬಾಗಿಲನ್ನು ಮುಚ್ಚದೆ ನಮ್ಮ ಜೀವನದ ಅನುಭವಗಳನ್ನು ತೆರೆದಿಡಲು ಇರುವ ಸೇತುಸಾಧನವೇ ಈ ಪುಸ್ತಕಗಳು. ಇವುಗಳನ್ನು ಭೇಟಿಯಾಗಿ ಅರ್ಥ ಮಾಡಿಕೊಂಡಾಗ ಅಲ್ಲಿನ ಸಾಲುಗಳು ನಮ್ಮನ್ನು ತಿದ್ದಿ ತೀಡಿ ತೆರೆದುಕೊಳ್ಳುವಂತೆ ಮಾಡುತ್ತವೆ. ಅಂತಹ ಪುಸ್ತಕಗಳನ್ನು ನಾವು ಓದಿ ಅರ್ಥ ಮಾಡಿಕೊಂಡು ಜಗತ್ತಿನ ಶ್ರೇಷ್ಠ ಮನುಷ್ಯನೆಂದು ಬೀಗುತ್ತೇವೆ. ಆ ಪುಸ್ತಕಗಳಿಂದ ನಾನು ಮನುಷ್ಯನಾದೇ ನನ್ನ ಮನಸ್ಸು ಸಾಕ್ಷತ್ಕಾರಗೊಂಡಿದೆ ಯಾವೋಬ್ಬ ನರಮನಸುಗಳು ಆ ಪುಸ್ತಕ ಮನಸ್ಸುಗಳಿಗೆ ಕೃತಘ್ನತೆ ಹೇಳದಿರುವುದಕ್ಕೆ ಆ ಪುಸ್ತಕಗಳಿಂದು ಬಾಯಿ ಕಳೆದುಕೊಂಡು ಸತ್ತಂತಿವೆ.

ನನ್ನ ಈ ಮಾತು ರುಚಿಸದಿರಬಹುದು ಯಾಕೆಂದರೆ ಪುಸ್ತಕ ಬರೆದವನು ಮನುಷ್ಯ ತಾನೇ ಎನ್ನಬಹುದು ಆದರೆ ಅವುಗಳನ್ನು ಬಹುದಕಾಲದವರೆಗೆ ಮನುಷ್ಯನ ಮನಸುಗಳ ಭಾವಾನುರಾಗದ ಬಿಂಕಗಳನ್ನು ಸಾರುವ ಕನ್ನಡಿ ಎಂಬುದನ್ನು ನಾವು ಮರೆಯುವಂತಿಲ್ಲ, ಮಾತಿಗೆ ಬರೆಹಗಳಿವೆ, ಪ್ರಣಯಕ್ಕೆ ಪ್ರೀತಿಯಿದೆ, ಅಪರಾಧಕ್ಕೆ ಕಾರಗೃಹಗಳಿವೆ, ಆದರೆ ಅನುಭವಗಳಿಗೆಲ್ಲಿದೆ ಜಾಗ? ಹಾಗೇ ನೋಡಿದರೆ ಪುಸ್ತಕಗಳು ನಮ್ಮಂತಹ ಮನುಷ್ಯರ ಅನುಭವಗಳನ್ನು, ಭಾವನೆಗಳನ್ನು, ವಿಚಾರಗಳನ್ನು, ಅಭಿವ್ಯಕ್ತಿಗಳನ್ನು ತಲೆಮಾರಿನಿಂದ ತಲೆಮಾರಿಗೆ ಕೊಂಡೊಯ್ಯುವ ಸುಂದರ ಕುಕ್ಕೆಗಳು. ಅಂತಹ ನಮ್ಮ ಪುಸ್ತಕದ ಮನಸುಗಳನ್ನು **ಗ್ರಂಥಾಲಯವೆಂಬ ಕೋಣೆಯ**ಲ್ಲಿ ಹೊಂದಿಸಿಡದೆ ಓದಲು ಬಿಡೋಣ!

ಈ ಪ್ರಕ್ರಿಯೆಯಲ್ಲಿ ಜನಗಳ ಮಧ್ಯೆಯಿರುವ ಆಚಾರ ವಿಚಾರಗಳ, ಸಂಸ್ಕೃತಿಗಳ ವಿನಿಮಯ, ರೂಢಿಗಳು, ಪರಂಪರೆಗಳು ಆಯಾ ಪ್ರದೇಶಗಳ ವ್ಯವಸ್ಥೆ ಹೀಗೆ ಹತ್ತು ಹಲವು ಅಂಶಗಳನ್ನು ತಿಳಿಯುತ್ತಾ, ಕಲಿಯುತ್ತಾ ಓದುತ್ತಾ ನಮ್ಮಷ್ಟಕ್ಕೆ ನಾವು ತೆರೆದುಕೊಂಡು ಮುಕ್ತವಾಗುತ್ತೇವೆ. ಅದು ನಮ್ಮ ಮುಂದಿನ ಪೀಳಿಗೆಗೆ ಅನುಕೂಲಿಸುವ ಮಟ್ಟಿಗೆ ಸಾಧ್ಯವಾಗುತ್ತದೆ. ಈ ಪುಸ್ತಕಗಳು ಪ್ರತಿಯೊಂದು ವ್ಯಕ್ತಿಯ ಬೆಳವಣಿಗೆ ಮತ್ತು ರಾಷ್ಟ್ರದ ಅಭಿವೃದ್ಧಿಯ ನಿರ್ಮಾಣಕ್ಕೆ ಕಾರಣವಾಗಬಲ್ಲದು ಎಂಬುದನ್ನು ನಾವು ನಂಬಲೇಬೇಕು, ಕಾಲಾಂತರದಲ್ಲಿ ಪುಸ್ತಕದ ವಿಚಾರಗಳು ಮುಕ್ತವಾಗಿ ವಿಶಾಲತೆಯನ್ನು ಪಡೆದುಕೊಳ್ಳಬಹುದು ಆದರೆ ಆ ವಿಷಯಗಳ ವೈಶಾಲ್ಯತೆಗೂ ಕಾರಣ ಮೂಲ ಪುಸ್ತಕದ ವಿಚಾರಗಳು, ಆ ವಿಚಾರಗಳನ್ನು ವಿಸ್ತರಿಸುವುದು. ಆ ವಿಚಾರಗಳ ಮೇಲೆ ಸಿದ್ಧಾಂತಗಳು, ಪ್ರಯೋಗಗಳು ನಡೆಸುವುದು. ಹೀಗಿರುವಾಗ ಅಂತಹ ಅಮೂಲ್ಯ ಮನಸ್ಸು (ಪುಸ್ತಕ)ಗಳನ್ನು ಗೆದ್ದಲು ಹತ್ತೋ ಮರದ ಕಪಾಟುವಿನಲ್ಲಿ ದೂಳಿಡಿಯುವಂತೆ ಮಾಡಿಬಿಡುವುದು ಸರಿಯೇ? ಮತ್ತು ನಾವಿಂದು ಕಲಿತಿರುವ ಹಾಗೂ ಕಲಿಯುವಂತಹ ಪ್ರಯೊಂದು ಜ್ಞಾನಕ್ಕೂ ಇಂತಹ ಪುಸ್ತಕಗಳು ತಾನೇ ದಾರಿ ದೀಪ!

ಪ್ರಸ್ತುತದಲ್ಲಿ ಗಮನಿಸುವಾಗ ಪುಸ್ತಕಗಳ ಜಮಾನ ಬದಲಾಗುತ್ತಿರುವುದು ಆತಂಕಕಾರಿ ವಿಷಯ. ಪುಸ್ತಕಗಳನ್ನು ಬರೆಯುವ ಹವ್ಯಾಸವೂ ಕ್ಷೀಣಿಸುತ್ತಿರುವುದು ಮತ್ತೊಂದು ವಿಷಾದದ ಸಂಗತಿ. ಇಂದಿನ ಮುದುಕರಿಂದ ಬಾಲ್ಯಾವಸ್ಥೆಯಲ್ಲಿರುವವರಿಗೂ ಈ ಓದಿನ ಗೀಳು ಸಾಫ್ಟ್ ಸಾಫ್ಟಾಗಿ ಬದಲಾಗಿತ್ತಿದೆ. ಬರೆಹಗಳು ಪುಸ್ತಕಗಳಿಗಿಂತ ಸಾಮಾಜಿಕ ಜಾಲ ತಾಣಗಳಲ್ಲೇ ಹೆಚ್ಚಾಗಿದೆ, ಬರೆಹಗಳು ಹಲವರ ಲೈಕ್/ ಕಾಮೆಂಟ್‌ಗಳಿಗೆ ಕಾಯುವ ಪ್ರಸಂಗಗಳು ಎದುರಾಗಿವೆ ಈ ಲೈಕ್, ಕಾಮೆಂಟ್‌ಗಳ ಬಿಂಕ ಚಾಟ್ ಮಾಡ್ಮಾಡ್ತಾ ಸಂಘರ್ಷಕ್ಕೆ ಕಾರಣವಾಗುತ್ತಿವೆ ಯುವಕರು ತಮ್ಮ ಅಮೂಲ್ಯ ಸಮಯವನ್ನು ಅದರಲ್ಲಿ ಕಳೆಯುತ್ತಾ ತಮ್ಮ ಇತರೆ ಕೌಶಲ್ಯಗಳನ್ನು ಅವರೇ ನಿರ್ನಾಮ ಮಾಡಿಕೊಳ್ಳುತ್ತಿದ್ದಾರೆ. ಜೊತೆಯಲ್ಲಿ ಪ್ರಾಣ ಕಳೆದುಕೊಂಡಿರುವ ಉದಾಹರಣೆಗಳು ಕಡಿಮೆಯೆನಿಲ್ಲ, ಅಷ್ಟರಮಟ್ಟಿಗೆ ಈ ಜಾಲತಾಣಗಳ ಪ್ರಭಾವಕ್ಕೆ ಆಧುನಿಕ ಯುವ ಸಮೂಹ ಮಾರುಹೋಗಿದೆ. ಈ ತಾಣಗಳಲ್ಲಿ ವ್ಯಕ್ತವಾಗುವ ವ್ಯಕ್ತಿಯ ಬರೆಹಗಳನ್ನು ಆಧರಿಸಿ ಆ ವ್ಯಕ್ತಿಯ ವ್ಯಕ್ತಿತ್ವವನ್ನು ಅಳೆಯ ಹೊರಟಿದ್ದೇವೆ, ಇದು ಎಷ್ಟು ಸರಿ? ಈ ಪೀಳಿಗೆಯ ಪ್ರತಿಯೊಬ್ಬನು ತಲೆಯೆತ್ತಿ ನಡೆಯುವುದನ್ನೇ ಮರೆತು ಹೋದಂತೆ ಬಾಸವಾಗುತ್ತದೆ.

ಇದು ಹೀಗೆ ಮುಂದುವರೆದರೆ ಈ ಪೀಳಿಗೆಗೆ ನಮ್ಮ ತಲೆಮಾರಿನ ಬರೆಹದ ಸಂಖ್ಯೆಗಳು ಬೆರಳೆಣಿಕೆ. ಈ ತಾಂತ್ರಿಕತೆಯ ಪ್ರಭಾವ ಮುಂಬರುವ ದಿನಗಳಲ್ಲಿ ಇರುವ ಪುಸ್ತಕಗಳನ್ನು ಸಾಫ್ಟ್ ಮಾಡಿ ನುಂಗಿ ನೀರು ಕುಡಿಯುತ್ತವೆ. ಪುಸ್ತಕ ಮಾರಾಟ ಇಂದು ಬೀದಿಗಿಳಿದಿದೆ. ಮೊನ್ನೆ ಹೈದ್ರಾಬಾದ್‌ನ ಕೋಠಿ ರಸ್ತೆಯಲ್ಲಿ ಸೆಕೆಂಡ್ ಹ್ಯಾಂಡ್ ಪುಸ್ತಕಗಳನ್ನು ಮಾರಾಟ ಮಾಡುತ್ತಿದ್ದರು. ಅವುಗಳ ಮಾಲೀಕ ಪುಸ್ತಕಗಳ ಮೇಲೆ ಹತ್ತುತ್ತಿದ್ದ. ಹತ್ತಿ ತುಳಿಯುತ್ತಿದ್ದ. ಬಿಸಾಡುತ್ತಿದ್ದ, ಅದರಿಂದಲೇ ಕಸವನ್ನು ದೂರ ತಳ್ಳುತ್ತಿದ್ದ. ಪುಸ್ತಕ ಯಾವ್ಯಾವ ಕೆಲಸಕ್ಕೆ ಉಪಯೋಗವಾಗುತ್ತದೆ. ಥೇ! ಎನಿಸಿತು. ಇಲ್ಲಿ ನಾವು ನೋಡಬೇಕಾಗಿರುವುದು ಮುಖ್ಯವಾಗಿ ಒಂದು ಪುಸ್ತಕ ಬರೆಯಲು ಲೇಖಕನಾದವನು ಎಷ್ಟು ಪರಿಶ್ರಮ ಹಾಕಿರುತ್ತಾನೆ, ಅದನ್ನು ಬರೆಯಲು ಏನೆಲ್ಲಾ ಅಭ್ಯಾಸ ಮಾಡಿರುತ್ತಾನೆ. ಯಾವೆಲ್ಲಾ ಪ್ರಯೋಗಗಳನ್ನು ಕಂಡುಕೊಂಡಿರುತ್ತಾನೆ ಎಂಬುದು ಇಂತಹ ಸಂದರ್ಭದಲ್ಲಿ ಗೌಣವಾಗುತ್ತದೆ. ಪುಸ್ತಕ ಎಂದಾಗ ನೆನಪಾಗುವುದು ಸಾಹಿತಿಕ, ಸಾಂಸ್ಕೃತಿಕ ಹಾಗೂ ವೈಚಾರಿಕ ಪರಂಪರೆಗಳು ಅವುಗಳಿಗೆ ಸಂದ ಪುರಸ್ಕಾರಗಳು. ಈ ಪ್ರಶಸ್ತಿ ಪುರಸ್ಕಾರಗಳು ವ್ಯಕ್ತಿಗೆ ನೀಡಿದ್ದಲ್ಲ. ಪುಸ್ತಕಗಳು ಸಂಪಾದಿಸಿದ್ದು. ಅಂದರೆ **ಬಾಯಿರದ ಪುಸ್ತಕಗಳು ಮಾತಾಡುವುದು ಎಂದರೆ ಇದೆ**. ಇಂತಹ ಪ್ರವೃತ್ತಿಯೇ ಮುಂದುವರೆದರೆ ಭವಿಷ್ಯದಲ್ಲಿ ಬರೆಹಗಳು ಕಣ್ಮರೆಯಾಗುತ್ತವೆ ಪುಸ್ತಕಗಳು ಮಾಯವಾಗುತ್ತವೆ. ಆ ಮನಸುಗಳಿಗೆ ಜಾಗ ನೀಡೋಣ, ಹೆಚ್ಚೆಚ್ಚು ಬರೆಯೋಣ, ಹೆಚ್ಚೆಚ್ಚು ಪುಸ್ತಕಗಳನ್ನು ಓದೋಣ!



## ಮುಲಾಮು ಹಚ್ಚಿದವನು  -ಮಂಜುಳಾ ಜಿ.ಹೆಚ್ ಮುದ್ದೇಬಿಹಾಳ್ ಟಿಎಲ್‌ಸಿ

ಮಂಟೋ ನೀ ಕಂಡ
ನನ್ನ ಜಗತ್ತು ಇನ್ನೂ ಮುಳುಗಿಲ್ಲ
ಗೊತ್ತಿಲ್ಲ ಅವನು ಯಾರೆಂದೂ ಆದರೂ

ಎಷ್ಟೋ ರಾತ್ರಿಗಳಿಗೆ ಜೊತೆಗಾರನಾಗಿದ್ದ

ಅಷ್ಟೇ ಅರಿವಿಲ್ಲದಂತೆ ಸುಮ್ಮನಾಗಿ ಬಿಡುತ್ತಿದ್ದ

ಇವನ್ಯಾರೋ ಬಂದು ಬಿಟ್ಟಿದ್ದಾನೆ,
ಕೇಳಿದರೆ ಒಪ್ಪಂದ
ಮನಸ್ಸು ಕಿರುಚಿದರೆ ಕಬ್ಬಿಣದ ಸರಳೊಂದ ತೋರಿಸಿ
ಬಾಯಿ ಮುಚ್ಚಿಸಿ ಮಲಗಿಸಿ ಮುಗಿಸೆ ಬಿಡುತ್ತಾನೆ

ಸುಡು ಸುಡು ವಿರಹವ ಹೊತ್ತು
ಚಂದ್ರನಂತಹ ನನ್ನ ತಂಪನ್ನೆಲ್ಲಾ ನಾಶ  ಮಾಡಿದರು
ಗತಿ ಇಲ್ಲ ನನ್ನಂತಹವಳಿಗೆ ಅವರಿಗೂ ಕೂಡಾ
ಬದುಕಿನ ಗಂಜಿಗೂ ನನಗಿರುವುದೊಂದೆ ಮಾರ್ಗ
ಅವರಿಗೂ ಕೂಡಾ ಇದೇ ಮಾರ್ಗ

ನಾನು ಯಾವುದೇ ತಪ್ಪು ಮಾಡಿಲ್ಲ
ಆದರೂ ತಿಪ್ಪೆಯಲ್ಲಿನ ಕಸ ಬಂದು ಮೈ ಮೇಲೆ ಬೀಳುತ್ತದೆ
ಮತ್ತೆ ಸಾಯಂಕಾಲ ಆಗುತ್ತಿದ್ದಂತೆ ತಯಾರಾಗಬೇಕು
ಚೂರೇ ಚೂರು ನಗು ಲೇಪಿಸಿ
ಕಣ್ಣಲ್ಲೇ ವಾಂಛೆ ಆಸೆಗಳ ತುಂಬಿ
ಅವರಿಗೇನೂ ಗೊತ್ತು ,
ನಾನು ಕೊಡುತ್ತಿರುವುದು
ಹಳಸಿದ ಮುತ್ತೆಂದು

ಅದಕ್ಕೆ ಪುಳಕಗೊಂಡು
ರಾತ್ರಿಯನ್ನೇಲ್ಲಾ ಮುಗಿಸೇ ಬಿಡುತ್ತಾನೆ

ಹಸಿರೊಡೆದು  ಹಕ್ಕಿಯಾಗಲು ನನ್ನೊಡಲ ಬಿಟ್ಟರೆ
ಅವಳಿಗೂ ಇದೇ ಲೋಕವಾ?
ಅಬ್ಬಾ! ಎದ್ದೇಳಲು ಆಗದು
ತೊಳ್ಳೆದು ಕೊಳ್ಳಬೇಕು
ಶುಭ್ರವಾಗಿ ,
ದುರ್ವಾಸನೆಯ ನಾತ ಮೈ ತುಬಾ ಹರಡಿದೆ,
ಈಗೀಗ ಮನಸ್ಸಿಗೂ ಕೂಡಾ

ಅರೇ ಕೈ ಕೊಡುತ್ತಿದ್ದಾನೆ
ನನ್ನ ಮೇಲೆತ್ತುತ್ತಿದ್ದಾನೆ
ಕುಳ್ಳಿರಿಸಿ ಮುಲಾಮು ಹಚ್ಚುತ್ತಿದ್ದಾನೆ
ಅವನೇ ಆ ರಾತ್ರಿಗಳಲ್ಲಿ ಜೊತೆಯಾದವನೆ
ನನ್ನ ಕಣ್ಣು ಮೋಸ ಮಾಡುವುದಿಲ್ಲ

ಅವನು ಉಸುರಿದ್ದು ಒಂದೇ ಮಾತು
ನೋವಾಗುತ್ತಿದ್ದೆಯೇ?
ಹೇಳಬೆಕೇನು?
ತಕ್ಷಣ ಅವನ ಪ್ರೀತಿ ಕಪಟವಿರಬಹುದಾ? ಎಂದೆನೊಸಿತು
ಅವನು ಅವಕಾಶವಾದಿ ಇರಬಹುದಾ?
ನಾನೇನೋ ದೇಹಕ್ಕೆ ಬಲ ತುಂಬಿ  ಛಲ ಕಲಿಸಿದ್ದೇನೆ
ಇಲ್ಲ ಹೋಗಲಿಲ್ಲ...ಮುಲಾಮು ಹಚ್ಚಿದವನ ಜೊತೆ

**36-ಕೋಟೆ-ನಾಡಿನ ಒಡನಾಟದ ಹೂರಣ** **-ರಾಘವೇಂದ್ರ ಗಂಗಾವತಿ**

ಇತ್ತೀಚಿಗೆ ಮತ್ತೊಂದ್ ರಾಜ್ಯದೊಳಗ ಹೆಜ್ಜಿಯಿಡೋ ಅವಕಾಶ ನಮಗ್ ಸಿಕ್ಕಿತ್ತು. ಅದು ಛತ್ತೀಸ್‌ಘಡ್...! ರೆಡ್ ಪಾಟ್ನಾ, ಘುಲ್ವಾ, ಅಪ್-ಟು-ಡೇಟ್, ಧಕರಿ, ಸಾತ್ತು, ಸಿಂಧೂರಿ, ಚಮತ್ಕಾರ್, ಚಂದ್ರಮುಖಿ, ಜ್ಯೋತಿ, ಲಾವ್ಕರ್, ಬಾದ್‌ಶಹ, ಬಹರ್, ಲಾಲೀಮಾ, ಸಟ್ಲೇಜ್, ಅಶೋಕಾ, ಪುಖ್ರಜ್, ಚಿಪ್ಸೋನಾ-1 &2, ಆನಂದ್... ಏನಿದೆಲ್ಲಾ ಅಂತಿರಾ? ನಿಮ್ಮ ಸಮೋಸಾದೊಳಗೆ ಇದರಲ್ಲಿ ಯಾವುದು ಇರತ್ತೋ ನಂಗೊತ್ತಿಲ್ಲ. ಐ ಥಿಂಕ್ ಯು ಗಾಟ್ ಇಟ್. ಹೌದು, ನಿಮ್ ಗೆಸ್ ಸರಿ ಅದಾರಿ. ಇವು ಭಾರತದಲ್ಲಿ ಬೆಳೆಯೋ ಆಲೂಗಡ್ಡೆ ತಳಿ ಅದಾವ್ರಿ. ಎಲ್ಲಾ ಬಿಟ್ಟ್ ಇದರ್ ಹಿಂದ್ ಯಾಕ್ ಗಂಟ್ ಬಿದ್ದೀರಿ ಅಂತಿರೇನ್. ಹೌದ್ರೀ, ಹಂಗಿತ್ತು ನಮ್ ಪರಿಸ್ಥಿತಿ, ಅವ್ಲಕ್ಕಿ ಒಗ್ಗಣ್ಣಿ, ಉಪ್ಪಿಟ್ಟು, ಸಾಂಬರ್, ಪಲ್ಯಾ, ಸಾರ್, ಚಟ್ನಿ, ಕಾಳ್‌ಪಲ್ಯ, ಎಂಥೆತದ್ದೋ ಪಲ್ಯ, ಎಲ್ಲಾನೂ ಆಲೂ ಮಯ ಆಗಿಬಿಟ್ಟಿದ್ವು ನಮ್ಗ. ಒಂದು ವಾರ ಛತ್ತಿಸ್‌ಘಡದಲ್ಲಿ ಆಲೂ ತಿಂದು-ತಿಂದೂ ಮತ್ಯಾವತ್ತೂ ಆಲೂ ಕೇಳಿರಬಾರ್ದೂ ಅನಿಸ್ತದ, ಆದ್ರ ನಮ್ ಕಡೆ ಮನ್ಯಾಗಿನ್ ಮಂದಿ ಟೀವ್ಯಾಗ್ ಬರು ಧಾರವಾಹಿಗಳಿಗೆ ಬೈಯ್ಕೊಂತಾನೇ ಒಂದ್‌ದಿನಾನೂ ಬಿಡದಂಗ್ ನೋಡ್ತೀರ್ತಾರಲ್ರಿ, ಹಂಗ ನಾವುನೂ ಬಾಳ್ ಇಷ್ಟಪಟ್ಟೇ ತಿಂತಿದ್ವಿ.

ಛತ್ತೀಸ್‌ಘಡ್‌ಕ್ಕೂ, ಆಲೂಗೂ ಬಾಳ್ ಹಿಂದಿಂದು ಏನ್ ಸಂಬಂಧ ಇಲ್ರಿ, ನಿಜ ಹೇಳ್ ಬೇಕಂದ್ರ ಛತ್ತೀಸ್‌ಘಡ್ ದೇಶದ ಅನ್ನದ ಬಟ್ಟಲುಗಳಲ್ಲಿ ಒಂದು. ಭತ್ತ ಸಿಕ್ಕಾಪಟ್ಟೆ ಬೆಳೀತಾರ್ರೀ, ನಮ್ ಧಮ್ತರಿ ಡಿಐ ಸುತ್ತಾ ಎಲ್ಲಿ ಕಣ್ಣಾಸಿದ್ರೂ ಬರೀ ಭತ್ತದ್ ಗದ್ದೀನಾ ಕಾಣಕತ್ತಿದ್ವು. ಆದ್ರ ಇತ್ತೀಚೀನ ದಿನದೊಳಗಾ ಇಲ್ಲಿ ಆಲೂ ಬೆಳೆನೂ ಫೇಮಸ್ ಆಗೇದ. ರೈತರ ಮುಖದೊಳಗ ನಗು ತರಿಸ್ಯಾದ ಈ ಬೆಳೆ. ಕೆಲವು ವರ್ಷಗಳ್ ಹಿಂದ್ ಇಲ್ಲಿನ ರೈತ್ರಿಗೆ ಆಲೂ ಬೆಳಿರಿ ಅಂದ್ರ, ***'ದಿಸ್ ಇಸ್ ನಾಟ್ ಮೈ ಕಪ್ ಆಫ್ ಟೀ'*** ಅಂತ ಮೂಗುಮುರೀತಿದ್ರಂತ್ರಿ. ಆದ್ರ ಹನಿಮೂನ್ ಸ್ಪಾಟ್ ಆಗಿರೋ, ಇತ್ತೀಚಿಗೆ ನನ್ನ ಪ್ರೀತಿಯ ಕತೆಗಾರ ಆಗಿರುವ ರಸ್ಕಿನ್ ಬಾಂಡ್‌ರು ಬಾಲ್ಯ ಕಳೆದ್ ನೆಲ ಸೀಮ್ಲಾದ 'ಕೇಂದ್ರೀಯ ಆಲೂ ಸಂಶೋಧನಾ ಸಂಸ್ಥೆ', ಬರೇ ಎರಡ್ ತಿಂಗಳ್ ಮಾತ್ರ ಚಳಿ ಇರೋ ಇಂತಹ ವಾತಾವರಣದಲ್ಲೂ ಬೆಳಿಬಹುದಾಂತಹ ಬ್ಯಾರೆ ಬ್ಯಾರೆ ತಳಿಗಳನ್ನು ಕಂಡು ಹಿಡಿದು, ಇಲ್ಲಿನ ರೈತ್ರಿಗೆ ಕೊಟ್ಟೈತಿ. ಮೂರ್‍ನಾಲ್ಕು ವರ್ಷ ಕಂಡಂಗ ಬೆಳೆ ತೆಗೆದ ರೈತ್ರು ಮತ್ತಾ ಹಿಂದಕ್ ನೋಡೆ ಇಲ್ಲ. ಮಹಾನದಿ ಪಾತ್ರದ ಫಲವತ್ತಾದ ಭೂಮಿ ಇವ್ರಿಗೆ ಬದ್ಕು ನೀಡ್ಯಾದ.

ರತ್ನಾಪುರ, ವಿಜಯಪುರ, ಖಾರೌಂಡ್, ಮಾರೋ, ಕೌತಗಢ್, ನವಾಗಢ್, ಸೋಂಥಿ, ಔಖಾರ್, ಪದರಭಟ್ಟಾ, ಸೇಖ್ರೀಯಾ, ಚಂಪಾ, ಲಫಾ, ಛುರಿ, ಕೆಂಡಾ, ಮಾಟೀನ್, ಅಪರೋರಾ, ಪೆಂದ್ರಾ, ಕುರ್ಕುತಿ-ಕಂಡ್ರಿ, ರಾಯಪುರ್, ಪಟನ್, ಸಿಮಗಾ, ಸಿಂಗಾರಪುರ್, ಲಾವನ್, ಒಮೆರಾ, ದುರ್ಗ್, ಸರಧಾ, ಸಿರಸಾ, ಮೆನ್ಹಾಡಿ, ಖಲ್ಲಾರಿ, ಸಿರ್ಸುರ್, ಫೈಗೆಸ್ವರ್, ಸಿಂಘನ್‌ಘರ್, ಸುವರ್ಮಾರ್, ತೆಂಗಣಗಢ್ ಮತ್ತು ಅಕಲ್ತಾರ ಎಂಬ 36 ಪ್ರಾಚೀನ ಕೋಟೆಗಳಿಂದಾಗಿ ಈ ನೆಲಕ್ ಈ ಹೆಸ್ರು ಅಂತಾರಿ, ಆದ್ರ ಪುರಾತತ್ವ ಇಲಾಖೆಯೋರು ಈ ಎಲ್ಲಾ ಕೋಟೆಗಳನ್ನ ಗುರುತಿಸಿಲ್ಲ, ಅದ್ಕ ಇದನ್ನ ಒಪ್ಪೋಕಾಗೋದಿಲ್ಲ ಅಂತ ತಜ್ಞರು ಹೇಳ್ತಾರ. ಇನ್ನೊಂದ್ ವಾದ ಏನಂದ್ರ ಚೆದೀಸ್‌ಘರ್‌ನ ಅಪಭ್ರಾಂಷು ಪದವಾಗಿ ಈ ಛತೀಸ್‌ಘಢ್ ಹೆಸ್ರು ಹುಟ್ಟುಕೊಂಡಿರ್‍ಬಹುದು ಅಂತ. ಚೇದೀಸ್‌ಘರ್ ಅಂದ್ರ ಚೇದಿಸ್‌ಗಳ ರಾಜ್ಯ ಅಂತ. ಈ ಪ್ರದೇಶ ಹಳೇ ಕಾಲದೊಳಗ ಆಧುನಿಕ ಓಡಿಸ್ಸಾದಲ್ಲಿರುವ ಕಳಿಂಗದ ಚೆದಿ ಮನೆತನದ ಆಳ್ವಿಕೆಗೆ ಒಳಪಟ್ಟಿತ್ತು. ಸದ್ಯಕ್ಕ ಈ ರಾಜ್ಯ ಬ್ಯಾರೆ ಬ್ಯಾರೆ 7 ರಾಜ್ಯಗಳ ಗಡೀನ ಹಂಚಿಕೊಂಡೈತಿ. ಇಲ್ಲಿನ ಜನಾ ಬಾಳ್ ಫ್ರೆಂಡ್ಲಿ ಮತ್ತ ಶ್ರಮ ಜೀವಿಗಳಾದರ, ಇಡೀ **ಡಿಐ**ನಲ್ಲಿ ಕೆಲ್ಸ ಮಾಡೋ ಎಲ್ಲಾ ಗೆಳೆಯರು ಅದ್ರ ಪ್ರತೀಕ ಅನ್ನುವಂಗ, ನಮಗ ಎಲ್ಲಾ ಅನಕೂಲ ಮಾಡಿದ್ರು.



ಅಂದಂಗ್ ಈ ರಾಜ್ಯಕ್ಕ್ ಪ್ರಾಚೀನ್ ಕಾಲದ್ ಇತಿಹಾಸ್ ಅದಾ. ವಿಶೇಷ ಏನಂದ್ರ ದೇಶದಾಗಿನ ಶೇ.70%ರಷ್ಟು ಬುಡಕಟ್ಟು ಜನ ಇಲ್ಲೇ ಅದಾರ್ರಿ, ಬಸ್ತಾರ್ ಜಿಲ್ಲೆ ಒಂದರೊಳಗಾ 27% ಟ್ರೈಬಲ್ಸ್ ಇದ್ದಾರ್ರಿ. ಹಿಂದಿ ಮತ್ತ ಛತ್ತೀಸ್‌ಘರಿ ಇಲ್ಲಿನ ಭಾಷೆಗಳಾದವು. ಈ ಬುಡುಕಟ್ಟುಗಳ ಪ್ರಭಾವದಿಂದಾನ ಈ ರಾಜ್ಯದೊಳಗ್ ಬ್ಯಾರೆ ಬ್ಯಾರೆ, ಸಂಸ್ಕೃತಿ, ಆಚರಣೆಗಳು, ಉಡುಗೆ-ತೊಡುಗೆಗಳು, ಆಹಾರ ಪದ್ಧತಿ, ನಂಬಿಕೆಗಳಾದವು. ಆಹಾರ ಅಂದಾಗ ಹೇಳಲೇ ಬೇಕಾದ್ದು ಏನಂದ್ರ, ಇಲ್ಲಿ ಬುಡಕಟ್ಟು ಆಹಾರ, ಸಾಮನ್ಯ ಆಹಾರ ಅಂತಹ ಎರಡು ಪದ್ಧತಿಗಳಾದವು. ಬುಡಕಟ್ಟು ಆಹಾರದೊಳಗ ಮೀನು, ಹಂದಿಮಾಂಸ, ಕೆಂದಿರುವೆ, ಹಾರಾಡುವ ನೊಣಗಳು, ಅಣಿಲುಗಳು, ಇಲಿಗಳು ಮತ್ತು ಕಾಡಣಬೆಗಳು ಮತ್ತು ಸಸ್ಯಗಳು ಮುಖ್ಯವಾಗಿರ್ತಾವ. ಗೊಂಡ, ಬೈಗಾ, ಬಿಸಾನ್ ಹಾರ್ನ್ ಮಾರಿಯಾ, ಅಭುಜ್ ಮಾರಿಯಾ, ಮಾರಿಯಾ, ಹಲ್ಬಾ, ಭಾತ್ರ ಮತ್ತು ಧುರ್ವಾ ಬುಡುಕಟ್ಟುಗಳು ಮುಖ್ಯವಾಗಿ ಕಂಡುಬರ್ತಾವ. ಬಸ್ತಾರ್‌ನ ಗೊಂಡಾ ಬುಡಕಟ್ಟು ಪ್ರಮುಖವೆನಿಸಿದೆ. ಮಹುವಾ ಗಿಡದ ಹಣ್ಣಿನ ರುಚಿ ಮನೆಮಾತಾಗ್ಯಾದ. ಇದ್ರ ಜೊತ್ಯಾಗಿ, ಜಿಲೇಬಿ, ರಖೀಯಾ ಬಡಿ ಮತ್ತು ಪೇಥಾ ಜನ್ರಿಗೆ ಅಚ್ಚು-ಮೆಚ್ಚಾಗ್ಯಾವ್ರಿ. ನಮ್ ಶಿವುಕುಮಾರ ಮತ್ತು ರಫೀರವರ ದೆಸಿಯಿಂದ ನಾವೂ ಇಲ್ಲಿನ ಜಿಲೇಬಿ ರುಚಿ ನೋಡುವಂಗಾಯ್ತು. ಊಟಾ ಆದ್ಮ್ಯಾಲ ಸಿಹಿ ಏನಾದ್ರೂ ಬೇಕಾಬೇಕ್ರಿ ಇಲ್ಲಿನ ಜನಕ್. ಒಟ್ಟಾ ಹೇಳಬೇಕಂದ್ರ ಇಲ್ಲಿನ್ ಜನಾ ಸಿಹಿಪ್ರೀಯರು. ಸಿಹಿ ಮನಸ್ಸಿನವ್ರು.



ಆರೂವರೆ ದಿನ ನಾವು ಅಲ್ಲಿದ್ದದ್ದು, ಕಂಡದ್ದು, ಕೇಳಿದ್ದು, ಅನುಭವಿಸಿದ್ದು ಎಲ್ಲಾನೂ ಅದ್ಭುತ! ನಮ್ ತಿಳ್ವಳಿಕಿ ವಿಸ್ತಾರ ಆಯ್ತು, ಹೊಸ ನೋಟ, ಒಳಹುಗಳು ಕಂಡವು. 34 ಜನ್ರಿದ್ದ ಭಾಷೆ ಮತ್ತು ಭಾಷೆ ಕಲಿಸುವಿಕೆಗೆ ಸಂಬಂಧಿಸಿ ನಡ್ದ ಓಪನ್ ಕೋರ್ಸ್‌ನ ಆ ಹಾಲ್ 27 ಭಾಷೆಗಳನ್ನಾಡಬಲ್ಲ ಬಹುಭಾಷಿಕರ ಗೋಷ್ಠಿಯಾಗಿತ್ತು.

ಒಲ್ಲದ್ ಮನಸ್ಸಿಂದಲೇ ತೆರ್ಳುವಾಗ ಹೆಜ್ಜಿ-ಹೆಜ್ಜಿನೂ ಭಾರ ಅನಸ್ಲಿಕತ್ತಿತ್ತು. ಮತ್ತೊಂದ್ ಕಡೆ, ಎಲ್ಲವನ್ನೂ ಕಂಡ ಮೇಲೆ, ಅಣ್ಣಾವ್ರೂ ನೆನಪಾಗಿ, “ಬಾಳಿನ ಬೆನ್ನುಹತ್ತಿ, ನೂರಾರು ಊರು ಸುತ್ತಿ, ಏನೇನೋ ಕಂಡಮೇಲೂ ನಮ್ಮೂರೆ ನಮ್ಗ ಮೇಲು, ಕಲಿಯೋಕೆ ಕೋಟಿ ಭಾಷೆ, ಆಡೋಕೆ ಒಂದೇ ಭಾಷೆ, ಕನ್ನಡ, ಕನ್ನಡ. ಕಸ್ತೂರೀeeeeeeeeee ಕನ್ನಡ” ಅಂತ ನಮ್ಮಲ್ಲೇ ಹಲವ್ರು ಗುನುಗಿದ್ರು. ಕನ್ನಡ ರಾಜ್ಯೋತ್ಸವದ ಶುಭಾಷಯಗಳ್ರೀ.







**TEAM *FA-TALKIES***

| | | | |
|---|---|---|---|
| 1 | Raghavendra.BT | raghavendra.bt@azimpremjifoundation.org | 9036463505 |
| 2 | Santosh Diksangi | santoshkumar.diksangi@azimpremjifoundation.org | 9019679673 |
| 3 | Lohitha HN | lohitha.n@azimpremjifoundation.org | 9008936789 |
| 4 | Vijayashree | vijayashree.ps@azimpremjifoundation.org | 9108785756 |
| 5 | Chitra P | chithra.p@azimpremjifoundation.org | 7899908166 |
| 6 | Shivakumar CS | shivakumara.cs@azimpremjifoundation.org | 9019396224 |
| 7 | Manjunatha A.R | manjunatha.ar@azimpremjifoundation.org | 8123057135 |

***Cover Page and Last page art by: Rajani Bhat, Ballari DI***